ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 19-01-1995.

# *ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಅಜ್ಞಾಕಾರಿ ಹಾಗೂ ಸರ್ವಾಂಶ(ಸರ್ವಸ್ವ) ತ್ಯಾಗಿಯಾಗಿರಿ.*

(ब्रह्मा बाप के कदम पर कदम रख आज्ञाकारी और सर्वंश त्यागी बनो)

ಇಂದು ಬೇಹದ್ದಿನ ಬಾಪ್‌ದಾದಾ ತನ್ನ ಬೇಹದ್ದಿನ ಸೇವೆಯ ಜೊತೆಗಾರರನ್ನು ನೋಡುತ್ತಿದ್ದಾರೆ ಎರಡು ಪ್ರಕಾರದ ಜೊತೆಗಾರರಿದ್ದಾರೆ- 1. ಒಬ್ಬರು ಸ್ನೇಹ ಸಂಬಂಧದ ಜೊತೆಯನ್ನು ನಿಭಾಯಿಸುವವರು ಹಾಗೂ 2. ಎರಡನೆಯವರು ಸ್ನೇಹ, ಸಂಬಂಧ ಹಾಗೂ ಸೇವೆಯ ಜೊತೆಯನ್ನು ನಿಭಾಯಿಸುವವರು. ಎರೆಡು ಪ್ರಕಾರದ ಜೊತೆಗಾರರನ್ನು ನೋಡುತ್ತಿದ್ದಾರೆ. ವಿಶ್ವದ ಕೊನೆಯ ಮೂಲೆಯಲ್ಲಾದರೂ ಇರಲಿ ಅವರು ಬಾಪ್‌ದಾದಾರವರ ಸಮ್ಮುಖದಲ್ಲಿದ್ದಾರೆ. ಬಾಪ್‌ದಾದಾ ಹಾಗೂ ಮಕ್ಕಳ ಪ್ರತಿಜ್ಞೆಯಾಗಿದೆ- ಎಲ್ಲೇ ಇದ್ದರೂ ಹೇಗೇ ಇದ್ದರೂ ಸದಾ ಜೊತೆ ಇರುತ್ತೇವೆ. ಇದು ಬ್ರಾಹ್ಮಣ ಜೀವನದ ಆದಿಯಿಂದ ಅಂತ್ಯದವರೆಗೆ ತಂದೆ ಹಾಗೂ ಮಕ್ಕಳ ಅವಿನಾಶಿ ಜೊತೆಯಾಗಿದೆ. ಭಲೇ ಮಕ್ಕಳು ಸಾಕಾರದಲ್ಲಿದ್ದಾರೆ ಹಾಗೂ ಬಾಪ್‌ದಾದಾ ಆಕಾರ ಮತ್ತು  ನಿರಾಕಾರದಲ್ಲಿದ್ದಾರೆ ಆದರೆ ಬೇರೆಯಾಗಿದ್ದಾರೆಯೇ? ಇಲ್ಲ ಅಲ್ಲವೇ? ಎಂದ ಮೇಲೆ ದೂರವಿದ್ದೀರಾ ಅಥವಾ ಸಮೀಪವಿದ್ದೀರಾ? ಈ ಹೃದಯದ ಸಮೀಪತೆ ಸಾಕಾರದಲ್ಲಿಯೂ ಸಹ ಸಮೀಪತೆಯ ಅನುಭವ ಮಾಡಿಸುತ್ತದೆ. ಬಲೆ ಯಾವುದೇ ದೇಶದಲ್ಲಿರಿ ಆದರೆ ಹೃದಯದ ಸಮೀಪತೆ ಜೊತೆಯ ಅನುಭವ ಮಾಡಿಸುತ್ತದೆ ಬೇರೆಯಾಗಲು ಸಾಧ್ಯವಿಲ್ಲ. ಅಸಂಭವವಾಗಿದೆ. ಪರಮಾತ್ಮನ ಪ್ರತಿಜ್ಞೆಯಾಗಿದೆ, ಎಂದೂ ಸುಳ್ಳಾಗಲು ಸಾಧ್ಯವಿಲ್ಲ. ಪರಮಾತ್ಮನ ಪ್ರತಿಜ್ಞೆ ಡ್ರಾಮದಲ್ಲಿ ಭಾವಿಯಾಗಿ ಬಿಡುತ್ತದೆ. ಭಾವಿ ಮುಂದೂಡಲು ಸಾಧ್ಯವಿಲ್ಲ. ಆದ್ದರಿಂದ ಸದಾ ಸಮೀಪವಿದ್ದೀರಿ. ಸದಾ ಜೊತೆಗಾರರಾಗಿದ್ದೀರಿ ಹಾಗೂ ಜೊತೆಗಾರರಾಗಿ ಕೈಯಲ್ಲಿ ಕೈ, ಜೊತೆಯನ್ನು ಪಡೆದುಕೊಳ್ಳುತ್ತಾ ಎಷ್ಟು ಮೋಜಿನಲ್ಲಿ ನಡೆಯುತ್ತಿದ್ದೀರಿ. ಮೋಜಿದೆಯೇ ಅಥವಾ ಪರಿಶ್ರಮವಿದೆಯೇ? ಸ್ವಲ್ಪ ಸ್ವಲ್ಪ ಪರಿಶ್ರಮವಿದೆಯೇ? ಯಾವಾಗಲಾದರೂ ಯಾವುದೇ ಮಾತು ಬಂದು ಬಿಟ್ಟರೆ ತಂದೆ ಬೇರೆಯಾಗಿ ಬಿಡುತ್ತಾರೆ. ಆದ್ದರಿಂದ ಯಾವುದೇ ವಿಷಯವನ್ನು ತರಬೇಡಿರಿ ಆಗ ತಂದೆ ಜೊತೆಯಲ್ಲಿರುತ್ತಾರೆ. ಮಾತು ತಂದೆಯನ್ನು ಬದಿಗೆ ಸರಿಸಿ ಬಿಡುತ್ತದೆ. ಹೇಗೆ ಮಧ್ಯದಲ್ಲಿ ಯಾವುದೇ ಒಂದು ಪರದೆ ಬಂದರೆ, ಪರದೆ ಬಂದಿರುವುದರಿಂದ ಬದಿಯಲ್ಲಿ ಸರಿದು ಬಿಡುತ್ತೀರಿ! ಹಾಗೆಯೇ ಈ ವಿಷಯವೆಂಬ ಪರದೆ ಮಧ್ಯ ಮಧ್ಯದಲ್ಲಿ ಬಂದುಬಿಡುತ್ತದೆ. ಆದರೆ ತರುವಂತಹವರು ಯಾರು? ಪರದೆಯ ಕೆಲಸವಾಗಿದೆ ಬರುವುದು ಹಾಗೂ ನಿಮ್ಮ ಕೆಲಸ ಏನಾಗಿದೆ? ಪರದೆಯನ್ನು ಸರಿಸುವುದೇ ಅಥವಾ ಸ್ವಲ್ಪ ಸ್ವಲ್ಪ ಮೋಜನ್ನು ತೆಗೆದುಕೊಳ್ಳುವುದೇ? ಬಾಪ್‌ದಾದಾರವರು ನೋಡುತ್ತಾರೆ. ಮಕ್ಕಳು ಕೆಲವೊಮ್ಮೆ ಮಾತುಗಳ ಮೋಜನ್ನು ತೆಗೆದುಕೊಳ್ಳುತ್ತಿದ್ದಾರೆ.

ಯಾರ ಜೊತೆ ಪ್ರೀತಿ ಇರುತ್ತದೆಯೋ ಆ ಪ್ರೀತಿಯ ಚಿಹ್ನೆಯಾಗಿದೆ - ಜೊತೆಯಾಗಿರುವುದು ಜೊತೆಯಾಗಿರುವ ಅರ್ಥ ಅಬೂವಿನಲ್ಲಿರುವುದು ಎಂದಲ್ಲ. ಆಬೂನಲ್ಲಂತೂ ನೋಡಿ ಸ್ವಲ್ಪ ಜನರು ಜಾಸ್ತಿ ಬಂದರೂ ಸಹ ನೀರಿಗೆ ಕಷ್ಟವಾಗಿ ಬಿಡುತ್ತದೆ ಅಲ್ಲವೇ? ಎಂದ ಮೇಲೆ ಸಾಕಾರದಲ್ಲಿ ಜೊತೆಯಾಗಿರುವುದಲ್ಲ ಆದರೆ ಹೃದಯದಿಂದ ಜೊತೆಯನ್ನು ನಿಭಾಯಿಸುವುದು. ಒಂದು ವೇಳೆ ಹೃದಯದಿಂದ ಜೊತೆಯನ್ನು ನಿಭಾಯಿಸುವುದಿಲ್ಲ ಎಂದರೆ ಮಧುಬನದಲ್ಲಿದ್ದರೂ ಸಹ ದೂರವಿದ್ದಂತೆ. ವಿದೇಶ ಅಥವಾ ಕೊನೆಯ ದೇಶದಲ್ಲಿದ್ದರೂ ಸಹ ಹೃದಯದ ಸಮೀಪತೆ ಇದ್ದರೆ ಅವರು ಜೊತೆಯಲ್ಲಿದ್ದಂತೆ. ಆದ್ದರಿಂದ ಬಾಪ್‌ದಾದಾರವರಿಗೆ ಹೃದಯರಾಮ ಎಂದು ಹೇಳಲಾಗುತ್ತದೆ. ಶರೀರರಾಮ ಎಂದು ಹೇಳುವುದಿಲ್ಲ. ಹೃದಯ ತಂದೆಯ ಮೇಲಿದೆಯಲ್ಲವೇ? ತಂದೆಯ ಹೃದಯದಲ್ಲಿ ನಿಮ್ಮ ಹೃದಯವಿದೆ ಹಾಗೂ ನಿಮ್ಮ ಹೃದಯದಲ್ಲಿ ತಂದೆಯ ಹೃದಯ ಇದೆ. ಈ ಆತ್ಮಿಕ ಜೊತೆಯನ್ನು ಹೃದಯವೇ ತಿಳಿಯಬಲ್ಲದು, ಅನುಭವಿಯಾಗಿದ್ದೀರಲ್ಲವೇ? ಅಥವಾ ಇಲ್ಲಿಂದ ಹೋದ ನಂತರ ದೂರವಾಗಿ ಬಿಟ್ಟೆವು ಎಂದು ಹೇಳುತ್ತೀರಾ? ಇಲ್ಲ. ಸದಾ ಜೊತೆಯನ್ನು ನಿಭಾಯಿಸುವುದು- ಇದನ್ನು ಬೇರೆ ಯಾವುದೇ ಆತ್ಮ ಇನ್ನೊಂದು ಆತ್ಮನೊಂದಿಗೆ ನಿಭಾಯಿಸಲು ಸಾಧ್ಯವಿಲ್ಲ. ಒಬ್ಬರೇ ಪರಮಾತ್ಮ ಆತ್ಮರ ಜೊತೆಗೆ ಜೊತೆಯನ್ನು ನಿಭಾಯಿಸಬಲ್ಲರು. ಹಾಗೂ ಈ ಪರಮಾತ್ಮನ ಜೊತೆ ನಿಭಾಯಿಸುವ ಭಾಗ್ಯ ನೀವು ಮಕ್ಕಳಿಗೆ ಇದೆಯಲ್ಲವೇ?

(ಇಂದು ಇಡೀ ಹಾಲ್ ನಲ್ಲಿ ಎಲ್ಲಾ ಸಹೋದರ ಸಹೋದರಿಯರು ನೆಲದ ಮೇಲೆ ಕುಳಿತಿದ್ದಾರೆ) ಬಹಳ ಸುಂದರವಾದ ದೃಶ್ಯವಾಗಿದೆ. ಬಾಪ್‌ದಾದಾರವರಿಗೆ ಇದನ್ನು ನೋಡಿ ಸ್ಮೃತಿಚಿಹ್ನೆ ನೆನಪಿಗೆ ಬರುತ್ತಿದೆ. ಸ್ಮೃತಿಚಿಹ್ನೆಯಲ್ಲಿ ರುದ್ರಮಾಲೆಯನ್ನು ತೋರಿಸುತ್ತಾರೆ. ಅದರಲ್ಲಿ ಕೇವಲ ಮುಖವೇ ಕಂಡು ಬರುತ್ತದೆ, ಶರೀರ ಕಾಣಿಸುವುದಿಲ್ಲ, ಇಲ್ಲಿಯೂ ಸಹ ಕೇವಲ ಮುಖವೇ ಕಾಣಿಸುತ್ತಿದೆ ಬಾಕಿ ಏನು ಕಾಣಿಸುತ್ತಿಲ್ಲ . ರುದ್ರಮಾಲೆಯ ಸ್ಮೃತಿಚಿಹ್ನೆ ಕಾಣಿಸುತ್ತಿದೆ. ಒಬ್ಬರ ಹಿಂದೆ ಒಬ್ಬರು ಕುಳಿತಿದ್ದೀರಲ್ಲವೇ ಹಾಗಾಗಿ ಶರೀರ ಮರೆಯಾಗಿಬಿಟ್ಟಿದೆ. ಮುಖವೇ ಕಾಣಿಸುತ್ತಿದೆ. ಚೆನ್ನಾಗಿದೆಯಲ್ಲವೇ! ಇದು ಕೂಡ ಒಂದು ಮಾಲೆಯಲ್ಲವೇ!

ಇದಾಗಿದೆ ಸ್ನೇಹದ ಪ್ರತ್ಯಕ್ಷ ಸ್ವರೂಪ- ಬ್ರಹ್ಮಾ ತಂದೆಯೊಂದಿಗೆ ಎಲ್ಲರ ಸ್ನೇಹವಿದೆ ಆದ್ದರಿಂದಲೇ ಬಂದಿದ್ದೀರಲ್ಲವೇ! ಹಾಗೂ ಎಲ್ಲರೂ ಬ್ರಹ್ಮಕುಮಾರ ಬ್ರಹ್ಮಕುಮಾರಿಯರು ಎಂದು ಕರೆಯಿಸಿಕೊಳ್ಳುತ್ತೀರಿ. ಶಿವಕುಮಾರ, ಶಿವಕುಮಾರಿ ಎಂದು ಕರೆಸಿಕೊಳ್ಳುವುದಿಲ್ಲ ಎಂದ ಮೇಲೆ ಬ್ರಹ್ಮಾ ತಂದೆಯೊಂದಿಗೆ ಜಾಸ್ತಿ ಪ್ರೀತಿ ಇದೆಯಲ್ಲವೇ ಹಾಗೂ ಬ್ರಹ್ಮಾ ತಂದೆಯದ್ದು ಸಹ ಸದಾ ಮಕ್ಕಳೊಂದಿಗೆ ಪ್ರೀತಿ ಇದೆ. ಆದ್ದರಿಂದ ಅವ್ಯಕ್ತವಾದರೂ ಅವ್ಯಕ್ತ ಪಾಲನೆಯನ್ನು ಮಾಡುತ್ತಿದ್ದಾರೆ. ಅವ್ಯಕ್ತ ಪಾಲನೆ ಲಭಿಸುತ್ತಿದೆಯಲ್ಲವೇ ಅಥವಾ ನಾವು ಬ್ರಹ್ಮಾ ತಂದೆಯ ಪಾಲನೆಯನ್ನು ಅನುಭವ ಮಾಡಿಕೊಳ್ಳುತ್ತಿಲ್ಲ ಎನ್ನುತ್ತೀರಾ? ಅನುಭವ ಮಾಡಿಕೊಳ್ಳುತ್ತಿಲ್ಲವೇ? ಆದರೆ ಬ್ರಹ್ಮಕುಮಾರಿ, ಕುಮಾರರು ಎಂದು ಏಕೆ ಕರೆಯಿಸಿಕೊಳ್ಳುತ್ತಿದ್ದೀರಿ? ತಂದೆಯ ಪಾಲನೆ ಇಲ್ಲದೆ ಜನಿಸಿದ್ದೀರಾ? ಒಂದು ವೇಳೆ ಬ್ರಹ್ಮಾ ತಂದೆಯ ಪಾಲನೆ ಇಲ್ಲದಿದ್ದರೆ ಇಂದು ಕೇವಲ ನಿರಾಕಾರ ತಂದೆಯ ಪಾಲನೆಯಿಂದ ರಚನೆ ಹಾಗೂ ಯಜ್ಞದ ವೃದ್ಧಿ ಆಗಲು ಸಾಧ್ಯವಾಗುತ್ತಿರಲಿಲ್ಲ. ಡಬಲ್ ವಿದೇಶಿಯರಿಗೆ ಬ್ರಹ್ಮಾ ತಂದೆಯ ಪಾಲನೆ ಸಿಗುತ್ತಿದೆಯಲ್ಲವೇ? (ಹೌದು) ನೋಡಿ, ವಿದೇಶದಲ್ಲೂ ತಂದೆ ಹೋಗುತ್ತಾರೆ. ಎಂದ ಮೇಲೆ ಭಾರತದಲ್ಲಿ ಬಂದು ಪಾಲನೆ ಮಾಡುವುದಿಲ್ಲವೇ? ಬಾಬಾರವರನ್ನು ನಾವು ನೋಡಿಲ್ಲ ಎಂದು ದೂರು ಕೊಡುವುದಿಲ್ಲವಲ್ಲವೇ? ಸದಾ ಮಿಲನ

ಮಾಡುತ್ತಾರೆ. ಸದಾ ನೋಡುತ್ತಿರುತ್ತಾರೆ. ಸದಾ ಜೊತೆಯಲ್ಲಿ ಇರುತ್ತಾರೆ. ಸಾಕಾರ ಶರೀರದಲ್ಲಿ, ಸಾಕಾರ ರೂಪದಲ್ಲಂತೂ ಸದಾ ಜೊತೆಯಾಗಿ ಇರಲು ಸಾಧ್ಯವಾಗುವುದಿಲ್ಲ ಆದರೆ ಅವ್ಯಕ್ತ ರೂಪದಲ್ಲಿ ಎಲ್ಲರಿಗೂ ಜೊತೆಯನ್ನು ಕೊಡಬಹುದು, ಯಾವಾಗ ಬೇಕಾದರೂ ಮಿಲನದ ಬಾಗಿಲು ತೆರೆದಿದೆ. ಅವ್ಯಕ್ತ ವತನದಲ್ಲಿ ಮಿಲನ ಮಾಡದಿದ್ದರೆ ಈಗ ಜಾಗವಿಲ್ಲ, ಈಗ ಸಮಯವಿಲ್ಲ, ಎಂದು ಹೇಳುವುದಿಲ್ಲ. ದೇಹದಲ್ಲಿ ದೇಹದ ಬಂಧನವಿದೆ ಹಾಗೂ ಅವ್ಯಕ್ತದಲ್ಲಂತೂ ದೇಹದ ಬಂಧನವೂ ಇಲ್ಲ. ದೇಹದ ಪ್ರಪಂಚದ ನಿಯಮಗಳ ಬಂಧನವೂ ಇಲ್ಲ. ಇಲ್ಲಂತೂ ನಿಯಮಗಳನ್ನು ಇಡಬೇಕಾಗುತ್ತದೆ ಅಲ್ಲವೇ- ಮುಂದೆ ಕುಳಿತುಕೊಳ್ಳಿ. ಹಿಂದೆ ಕುಳಿತುಕೊಳ್ಳಿ. ಈಗಲೂ ಸಮಯ ಪ್ರಮಾಣ ಬಹಳ ಬಹಳ-ಬಹಳ, ಭಾಗ್ಯವಂತರಾಗಿದ್ದೀರಿ! ಕುಳಿತುಕೊಳ್ಳಲು ಜಾಗವಂತೂ ಸಿಕ್ಕಿದೆಯಲ್ಲವೇ! ನಂತರ ನಿಂತುಕೊಳ್ಳಲೂ ಪರಿಶ್ರಮದಿಂದ ಜಾಗ ಸಿಗುತ್ತದೆ. ಏಕೆಂದರೆ ನೀವೆಲ್ಲರೂ ಅನ್ಯರಿಗೆ ಚಾನ್ಸ್ ಕೊಡಬೇಕಾಗುತ್ತದೆ. ಈಗಂತೂ ನಿಮಗೆ ಚಾನ್ಸ್ ಸಿಕ್ಕಿದೆ. ಈಗ ನೋಡಿ ಮಧುಬನದವರು ನಿಮಗೆ ಚಾನ್ಸ್ ಕೊಡಬೇಕಾಗಿ ಬಂದಿದೆ! (ಎಲ್ಲಾ ಮಧುಬನ ನಿವಾಸಿ ಹಾಗೂ ಆಬು ನಿವಾಸಿಗಳು ಪಾಂಡವ ಭವನದಲ್ಲಿ ಕುಳಿತು ಮುರಳಿಯನ್ನು ಆಲಿಸುತ್ತಿದ್ದಾರೆ) ಇದು ಸಹ ಪರಿವಾರದ ಪ್ರೀತಿಯಾಗಿದೆ.

ಬ್ರಹ್ಮಾ ತಂದೆಯೊಂದಿಗೆ ಪ್ರೀತಿ ಅರ್ಥಾತ್ ತಂದೆಯ ಸಮಾನರಾಗುವುದು ನಿರಾಕಾರನ ಸಮಾನವಾಗುವುದು. ಸ್ವಲ್ಪ ಸಮಯದ ಅನುಭವ ಮಾಡುತ್ತೀರಾ. ಆದರೆ **ಬ್ರಾಹ್ಮಣ ಅರ್ಥಾತ್ ಸದಾ ಬ್ರಹ್ಮಾ ಸಮಾನ ಬ್ರಹ್ಮಾಚಾರಿ. ಯಾವುದು ಬ್ರಹ್ಮಾ ತಂದೆಯ ಆಚರಣೆಯಾಗಿದೆಯೋ ಅದೇ ಸರ್ವ ಬ್ರಾಹ್ಮಣರ ಆಚರಣೆ ಅರ್ಥಾತ್ ಕರ್ಮ ಉಚ್ಚಾರಣೆಯು ಬ್ರಹ್ಮಾ ತಂದೆಯ ಸಮಾನ, ಆಚರಣೆಯೂ ಬ್ರಹ್ಮಾ ತಂದೆಯ ಸಮಾನ. ಇದಕ್ಕೆ ಫಾಲೋ ಫಾದರ್ ಎಂದು ಹೇಳಲಾಗುತ್ತದೆ.** ಆದ್ದರಿಂದ ಬ್ರಹ್ಮಾ ತಂದೆಯ ಪ್ರತಿ ಹೆಜ್ಜೆಯ ಮೇಲೆ ಹೆಜ್ಜೆ ಇಡುವುದು, ಇದಕ್ಕೆ ಹೇಳಲಾಗುತ್ತದೆ ಫಾಲೋ ಫಾದರ್. ಬ್ರಹ್ಮಾ ತಂದೆಯು ತಂದೆಯ ಶ್ರೀಮತದ ಅನುಸಾರ ಮೊದಲ ಹೆಜ್ಜೆ ಯಾವುದನ್ನು ಇಟ್ಟರು?

ಮೊದಲ ಹೆಜ್ಜೆ ಆಜ್ಞಾಕಾರಿಯಾದರು. ಯಾವ ಆಜ್ಞೆ ಸಿಕ್ಕಿತೋ ಅದೇ ಆಜ್ಞೆಯನ್ನು ಪ್ರತ್ಯಕ್ಷ ಸ್ವರೂಪದಲ್ಲಿ ತಂದರು. ಎಂದ ಮೇಲೆ ಚೆಕ್ ಮಾಡಿ- ಮೊದಲ ಹೆಜ್ಜೆಯಲ್ಲಿ ಫಾಲೋ ಫಾದರ್ ಮಾಡಿದ್ದೇನೆಯೇ? ಅಮೃತ ವೇಳೆಯಿಂದ ಹಿಡಿದು ರಾತ್ರಿ ಮಲಗುವವರೆಗೆ ಮನಸಾ, ವಾಚಾ, ಕರ್ಮಣಾ, ಸಂಬಂಧ ಸಂಪರ್ಕದಲ್ಲಿ ಯಾವ ಆಜ್ಞೆ ಸಿಕ್ಕಿದೆಯೋ ಅದರ ಪ್ರಮಾಣ ನಡೆಯುತ್ತಿದ್ದೇನೆಯೇ? ಅಥವಾ ಕೆಲವು ಆಜ್ಞೆ ಪಾಲನೆ ಮಾಡುತ್ತೇವೆ ಹಾಗೂ ಕೆಲವು ಮಾಡುವುದಿಲ್ಲವೇ? ಸಂಕಲ್ಪವು ಸಹ ಆಜ್ಞೆಯ ಪ್ರಮಾಣವಾಗಿದೆಯೇ ಅಥವಾ ಮಿಕ್ಸ್ ಆಗಿದೆಯೇ? ಒಂದು ವೇಳೆ ಮಿಕ್ಸ್ ಆಗಿದ್ದರೆ ಫುಲ್ ಆಜ್ಞಾಕಾರಿಯಾಗಿದ್ದೀರೋ ಅಥವಾ ಅರ್ಧ ಆಜ್ಞಾಕಾರಿಯಾಗಿದ್ದೀರೋ? ಪ್ರತಿ ಸಮಯದ ಸಂಕಲ್ಪದ ಆಜ್ಞೆ ಸ್ಪಷ್ಟವಾಗಿ ಸಿಕ್ಕಿದೆ. ಅಮೃತ ವೇಳೆ ಯಾವ ಸಂಕಲ್ಪ ಮಾಡಬೇಕು ಇದು ಸಹ ಸ್ಪಷ್ಟವಾಗಿದೆಯಲ್ಲವೇ? ಎಂದ ಮೇಲೆ ಫಾಲೋ ಮಾಡುತ್ತೀರೋ ಅಥವಾ ಕೆಲವೊಮ್ಮೆ ಪರಂಧಾಮದಲ್ಲಿ ಹೋಗುವಿರಿ ಹಾಗೂ ಕೆಲವೊಮ್ಮೆ ನಿದ್ರಾಲೋಕದಲ್ಲಿ ಹೋಗಿ ಬಿಡುತ್ತೀರಾ? ಪ್ರತಿ ಕರ್ಮದಲ್ಲಿ ಪ್ರತಿ ಸಮಯ ಹೆಜ್ಜೆಯ ಮೇಲೆ ಹೆಜ್ಜೆ ಇದೆಯೇ? ತಂದೆಯ ಹೆಜ್ಜೆ ಒಂದು ಹಾಗೂ ಮಕ್ಕಳ ಹೆಜ್ಜೆ ಇನ್ನೊಂದು ಆದರೆ ಅವರಿಗೆ ಆಜ್ಞಾಕಾರಿ ಎಂದು ಹೇಳಲು ಆಗುವುದಿಲ್ಲ ಅಲ್ಲವೇ! ಭಲೇ ಪರಮಾರ್ಥದಲ್ಲಿ, ಭಲೇ ವ್ಯವಹಾರದಲ್ಲಿ, ಎರಡರಲ್ಲೂ ಯಾವ ರೀತಿ ಆಜ್ಞೆ ಸಿಕ್ಕಿದೆಯೋ ಅದೇ ರೀತಿ ಆಜ್ಞೆಯ ಪಾಲನೆಯನ್ನು ಮಾಡುವುದು- ಇದರ ಪರ್ಸೆಂಟೇಜನ್ನು ಪರಿಶೀಲನೆ

ಮಾಡಿಕೊಳ್ಳಿ. ಪರಿಶೀಲನೆ ಮಾಡುವುದಂತು ಬರುತ್ತದೆಯಲ್ಲವೇ? ಮೊದಲ ಹೆಜ್ಜೆ ಆಜ್ಞಾಕಾರಿ ಆದರು. ಆದ್ದರಿಂದ ಆಜ್ಞಾಕಾರಿಗೆ ಸದಾ ತಂದೆಯ ಆಶೀರ್ವಾದ ಸ್ವತಃವಾಗಿ ಸಿಗುತ್ತದೆ ಹಾಗೂ ಜೊತೆಜೊತೆ ಬ್ರಾಹ್ಮಣ ಪರಿವಾರದ ಆಶೀರ್ವಾದವೂ ಸಿಗುತ್ತದೆ. ಆದ್ದರಿಂದ ಪರಿಶೀಲಿಸಿಕೊಳ್ಳಿರಿ. ಏನೆಲ್ಲಾ ಸಂಕಲ್ಪ ಮಾಡುತ್ತೇನೆ, ಬಲೆ ಸ್ವಯಂನ ಪ್ರತಿ ಅಥವಾ ಸೇವೆಯ ಪ್ರತಿ, ಸ್ಥೂಲ ಕರ್ಮದ ಪ್ರತಿ ಅಥವಾ ಅನ್ಯ ಆತ್ಮರ ಪ್ರತಿ, ಅದರಲ್ಲಿ ಎಲ್ಲರ ಆಶೀರ್ವಾದ ಸಿಕ್ಕಿದೆಯೇ? ಏಕೆಂದರೆ ಆಜ್ಞಾಕಾರಿ ಆಗುವುದರಿಂದ ಎಲ್ಲರ ಆಶೀರ್ವಾದ ಸಿಗುತ್ತದೆ ಹಾಗೂ ಒಂದು ವೇಳೆ ಆಶೀರ್ವಾದ ಸಿಗುತ್ತಿದ್ದರೆ ಅದರ ಚಿಹ್ನೆಯಾಗಿದೆ ಆಶೀರ್ವಾದದ ಪ್ರಭಾವದಿಂದ ಹೃದಯ ಸದಾ ಸಂತುಷ್ಟವಾಗಿರುತ್ತದೆ. ಮನಸ್ಸು ಸಂತುಷ್ಟವಾಗಿರುತ್ತದೆ. ಹೊರಗಿನ ಸಂತುಷ್ಟತೆ ಅಲ್ಲ ಆದರೆ ಮನದ ಸಂತುಷ್ಟತೆ ಹಾಗೂ ಮನಸ್ಸಿನ ಸಂತುಷ್ಟತೆಯೂ ಯಥಾರ್ಥವಾಗಿದೆಯೇ ಅಥವಾ ತೋರಿಸಿಕೊಳ್ಳಲೋ? ಇದರ ಚಿಹ್ನೆಯಾಗಿದೆ. ಒಂದು ವೇಳೆ ಯಥಾರ್ಥ ರೀತಿಯಲ್ಲಿ ಯಥಾರ್ಥ ಆಜ್ಞಾಕಾರಿಯಾಗಿದ್ದರೆ, ಆಶೀರ್ವಾದಗಳಿದ್ದರೆ ಸದಾ ಸ್ವಯಂ ಹಾಗೂ ಸರ್ವರೂ ಡಬಲ್ ಲೈಟ್ ಆಗಿರುವಿರಿ. ಒಂದು ವೇಳೆ ಡಬಲ್ ಲೈಟ್ ಆಗಿಲ್ಲ ಎಂದರೆ ಮನಸ್ಸಿನ ಸಂತುಷ್ಟತೆ ಇಲ್ಲ ಎಂದು ತಿಳಿದುಕೊಳ್ಳಿ. ತಂದೆಯ ಹಾಗೂ ಪರಿವಾರದ ಆಶೀರ್ವಾದವೂ ಸಹ ಸಿಗುತ್ತಿಲ್ಲ. ಪರಿವಾರದ ಆಶೀರ್ವಾದವು ಸಹ ಅವಶ್ಯಕವಾಗಿದೆ. ನಮ್ಮ ಕನೆಕ್ಷನ್ ಅಂತೂ ತಂದೆಯೊಂದಿಗೆ ಇದೆ. ತಂದೆಯ ಆಶೀರ್ವಾದವಂತು ಇದೆ. ಪರಿವಾರದೊಂದಿಗೆ ಸಂಬಂಧ ಸರಿಯಾಗಿಲ್ಲ ಇದರಿಂದ ಯಾವುದೇ ತೊಂದರೆ ಇಲ್ಲ ಎಂದು ತಿಳಿಯಬೇಡಿ. ಮೊದಲೂ ತಿಳಿಸಿದ್ದೆವು- ಮಾಲೆಯಲ್ಲಿ ಕೇವಲ ಯುಗಲ್ ಮಣಿ ಇಲ್ಲ, ಅದರಿಂದ ಮಾಲೆ ತಯಾರಾಗುವುದಿಲ್ಲ ಎಂದ ಮೇಲೆ ಮಾಲೆಯಲ್ಲಿ ಬರಬೇಕು ಎಂದರೆ ಪೂರ್ತಿ ಲಕ್ಷ್ಯವಿಡಿ- ಪ್ರತಿಯೊಂದು ಆತ್ಮ ನನ್ನನ್ನು ನೋಡಿ ಖುಷಿಯಾಗಬೇಕು, ನೋಡಿ ಹಗುರವಾಗಬೇಕು, ಹೊರೆ ಸಮಾಪ್ತಿಯಾಗಿ ಬಿಡಬೇಕು ಎಂದ ಮೇಲೆ ಹೃದಯದ ಸಂತುಷ್ಟತೆ ಹಾಗೂ ಅಜ್ಞಾಕಾರಿಯಾದಾಗ ಪಡೆದಿರುವ ಆಶೀರ್ವಾದಗಳು ಸ್ವಯಂನ್ನು ಲೈಟ್ ಹಾಗೂ ಅನ್ಯರನ್ನು ಸಹ ಲೈಟ್ ಮಾಡಿಬಿಡುತ್ತದೆ. ಇದರಿಂದ ನಾವು ಎಲ್ಲಿಯವರೆಗೆ ಆಜ್ಞಾಕಾರಿ ಆಗಿದ್ದೇವೆ ಎಂದು ತಿಳಿದುಕೊಳ್ಳಿ. ಹೇಗೆ ಬ್ರಹ್ಮಾ ತಂದೆಯನ್ನು ನೋಡಿ ಪ್ರತಿಯೊಬ್ಬರೂ- ಚಿಕ್ಕವರು, ದೊಡ್ಡವರು ಸಂತುಷ್ಟರಾಗಿ ಖುಷಿಯಲ್ಲಿ ನೃತ್ಯ ಮಾಡುತ್ತಿದ್ದರು. ನೃತ್ಯ ಮಾಡುವ ಈ ಸಮಯದಲ್ಲಂತೂ ಹಗುರವಾಗಿರುತ್ತಾರೆ ಆಗಲೇ ನೃತ್ಯ ಮಾಡಲು ಸಾಧ್ಯ. ಭಲೆ ಯಾರೇ ದಪ್ಪವಾಗಿದ್ದರೂ ಸಹ ಮನಸ್ಸು ಹಗುರವಾಗಿದ್ದರೆ ನೃತ್ಯ ಮಾಡುತ್ತಾರೆ ಹಾಗೂ ಯಾರಾದರೂ ಸಣ್ಣವಿದ್ದರೂ ಅವರ ಮನಸ್ಸು ಭಾರಿ ಯಾಗಿದ್ದರೆ ನೃತ್ಯ ಮಾಡಲು ಆಗುವುದಿಲ್ಲ. ನಿಮ್ಮ ಮಾತು ಹೇಗಿರಬೇಕೆಂದರೆ ಅದರಿಂದ ಸ್ವಯಂನಿಂದ ಸ್ವಯಂ ಕೂಡ ಸಂತುಷ್ಟವಾಗಿರಬೇಕು ಮತ್ತು ಇತರರು ಕೂಡ ಸಂತುಷ್ಟವಾಗಬೇಕು. ಹಾಗಿದ್ದಿರಾ? ಇದು ನಮ್ಮ ಭಾವವವಲ್ಲ ಅಥವಾ ಇದು ನಮ್ಮ ಭಾವನೆ ಅಲ್ಲ ಎಂದು ಹೇಳಬಾರದು ಆದರೆ ಆ ಭಾವ ಮತ್ತು ಭಾವನೆ ಏಕೆ ಸೇರಿಕೊಳ್ಳುತ್ತಿಲ್ಲ? ಭಾವ ಮತ್ತು ಭಾವನೆ ಚೆನ್ನಾಗಿದ್ದರೆ ಆ ವೈಬ್ರೇಶನ್ಸ್(ತರಂಗಗಳು) ಇತರರಿಗೆ ಏಕೆ ಸೇರಿಕೊಳ್ಳುತ್ತಿಲ್ಲ? ಕಾರಣವೇನು? ಯಾವುದೋ ಒಂದು ಕಾರಣವಿರುತ್ತದೆ ಅಲ್ಲವೇ ಆದ್ದರಿಂದ ಪರಿಶೀಲಿಸಿಕೊಳ್ಳಿರಿ ಆಶೀರ್ವಾದಗಳಿಗೆ ಪಾತ್ರನಾಗಿ ಎಷ್ಟರವರೆಗೆ ಆಗಿದ್ದೇನೆ ಎಂದು?

ಈಗ ಎಷ್ಟು ತಂದೆಯ ಹಾಗೂ ಬ್ರಾಹ್ಮಣ ಆತ್ಮರ ಆಶೀರ್ವಾದಗಳ ಪಾತ್ರರಾಗುತ್ತೀರೋ ಅಷ್ಟೇ ರಾಜ್ಯದ ಪಾತ್ರರಾಗುತ್ತೇವೆ. ಒಂದು ವೇಳೆ ಈಗ ಬ್ರಾಹ್ಮಣ ಪರಿವಾರವನ್ನು ಸಂತುಷ್ಟರನ್ನಾಗಿ ಮಾಡಲು ಆಗುತ್ತಿಲ್ಲ. ಎಂದರೆ

ರಾಜ್ಯವನ್ನು ಹೇಗೆ ನಡೆಸುತ್ತೀರಿ! ರಾಜ್ಯವನ್ನು ಹೇಗೆ ಸಂತುಷ್ಟವನ್ನಾಗಿ ಮಾಡುತ್ತೀರಿ! ಏಕೆಂದರೆ ಬ್ರಾಹ್ಮಣ ಆತ್ಮರು ನಿಮ್ಮ ರಾಯಲ್ ಫ್ಯಾಮಿಲಿಯಲ್ಲಿ ಬರುತ್ತಾರೆ. ಯಾರು ಪರಿವಾರವನ್ನು ಸಂತುಷ್ಟವಾಗಿ ಇಡಲು ಆಗುತ್ತಿಲ್ಲವೋ ಅವರು ಪ್ರಜೆಗಳನ್ನು ಹೇಗೆ ಸಂತುಷ್ಟರನ್ನಾಗಿ ಮಾಡುವರು? ಸಂಸ್ಕಾರವನ್ನಂತು ಇಲ್ಲಿಯೇ ತುಂಬಿಕೊಳ್ಳಬೇಕು ಅಲ್ಲವೇ! ಅಥವಾ ಅಲ್ಲಿ ಯೋಗ ಮಾಡಿ ತುಂಬಿಕೊಳ್ಳುವಿರಾ! ಇಲ್ಲಿಯೇ ತುಂಬಿಕೊಳ್ಳಬೇಕು. ಒಂದುವೇಳೆ ವರ್ತಮಾನ ಬ್ರಾಹ್ಮಣ ಪರಿವಾರದಲ್ಲಿ ಕಾರಣದ ನಿವಾರಣೆ ಮಾಡಲು ಆಗುತ್ತಿಲ್ಲ, ಕಾರಣ ಎಂದೇ ಹೇಳುತ್ತಿರುವಿರಿ ಎಂದರೆ ಎಲ್ಲಿ ಕಾರಣವಿದೆಯೋ ಅಲ್ಲಿ ನಿವಾರಣಾ ಶಕ್ತಿ ಇಲ್ಲ. ಒಂದು ವೇಳೆ ಪರಿವಾರದಲ್ಲಿ ನಿವಾರಣಾ ಶಕ್ತಿ ಇಲ್ಲ ಎಂದರೆ ವಿಶ್ವದ ರಾಜ್ಯವನ್ನು ಹೇಗೆ ನಿವಾರಣೆ ಮಾಡುತ್ತೀರಿ. ಏಕೆಂದರೆ ನಿಮ್ಮ ರಾಜ್ಯದಲ್ಲಿ ಪ್ರತಿಯೊಬ್ಬ ಆತ್ಮ ಸದಾ ನಿವಾರಣಾ ಸ್ವರೂಪವಾಗಿರುತ್ತದೆ. ಅಲ್ಲಿ ಕಾರಣವಿರುತ್ತದೆಯೇ? ಈಗ ರಾಜ್ಯಸಭೆಯಲ್ಲಿ ಕಾರಣವನ್ನು ಹೇಳುತ್ತಾರೆ- ಈ ಕಾರಣದಿಂದ, ಈ ಕಾರಣವಾಗಿದೆ. ಇಂತಹ ಕಾರಣವಾಗಿದೆ. ಅಲ್ಲಿ ಇಂತಹ ರಾಜ್ಯ ದರ್ಬಾರು ಇರುತ್ತದೆಯೇ? ಅಲ್ಲಂತು ಕೇವಲ ಖುಷಿಯ ಸಮಾಚಾರವನ್ನು ಕೇಳುತ್ತಾರೆ. ಕೇವಲ ದರ್ಬಾರು ಅಲ್ಲ ಆದರೆ ಅದು ಬಹಳ ಒಳ್ಳೆಯ ಮಿಲನವಾಗಿದೆ. ಕಾರಣ ಎಂದು ಹೇಳಿ ತನ್ನನ್ನು ಆಶೀರ್ವಾದಗಳಿಂದ ವಂಚಿತರನ್ನಾಗಿ ಮಾಡಿಕೊಳ್ಳಬೇಡಿ. ಬ್ರಹ್ಮಾ ತಂದೆಯು ಕಾರಣವನ್ನು ನಿವಾರಣೆ ಮಾಡಿದರು ಆದ್ದರಿಂದಲೇ ನಂಬರ್ ವನ್ ಆದರು. ಬಾಪ್‌ದಾದಾರವರ ಬಳಿಯಂತೂ ಎಲ್ಲರ ಕಾರಣಗಳ ಫೈಲ್ ಒಟ್ಟುಗೂಡುತ್ತದೆ. ಎಲ್ಲರ ಫೈಲ್ ಇದೆ- ಕೆಲವರದ್ದು ಚಿಕ್ಕದು, ಕೆಲವರದ್ದು ದೊಡ್ಡ ಫೈಲ್ ಇದೆ. ಹಾಗಾದರೆ ಈಗಲೂ ಸಹ ಫೈಲ್ ಇಟ್ಟುಕೊಂಡು. ಫೈಲ್ ಅನ್ನು ವೃದ್ಧಿಗೊಳಿಸುತ್ತಾ ಇರಬೇಕೇ  ಅಥವಾ ರಿಫೈನ್(ಪರಿಶುದ್ಧ) ಆಗಬೇಕೆ" ಎಂದ ಮೇಲೆ ಇಂದಿನಿಂದ ಎಲ್ಲಾ ಫೈಲ್ ಅನ್ನು ಸಮಾಪ್ತಿ ಮಾಡಿ ಬಿಡುವುದೇ? ನಂತರ ಮತ್ತೆ ಹೊಸ ಫೈಲ್ ಅನ್ನು ಇಡಬೇಕಾಗಿ ಬರುವುದಿಲ್ಲ ತಾನೆ? ಒಂದು ವೇಳೆ ಹೊಸ ಫೈಲ್ ಇಟ್ಟರೆ ಫೈನ್(ಶಿಕ್ಷೆಗಳು) ಕಟ್ಟಬೇಕಾಗಿ ಬರುವುದು. ಯೋಚಿಸಿರಿ! ಹೇಳಿ- ಸಮಾಪ್ತಿ ಮಾಡುವುದೇ ಅಥವಾ ಸ್ವಲ್ಪ ದಿನ ಇಟ್ಟುಕೊಳ್ಳಬೇಕೇ? ಶಿವರಾತ್ರಿಯವರೆಗೆ ಇಟ್ಟುಕೊಳ್ಳಬೇಕೇ! ಶಿವರಾತ್ರಿಯವರೆಗೆ ಸ್ವಲ್ಪ ಮಾರ್ಜಿನ್ ಸಿಗಬೇಕು. ಅಲ್ಲಿಯವರೆಗೂ ಪುರುಷಾರ್ಥ ಮಾಡಿ ರಿಫೈನ್ ಆಗಿಬಿಡುತ್ತೇವೆ ಎಂದು ಯಾರು ತಿಳಿದುಕೊಳ್ಳುತ್ತೀರೋ ಅವರು ಕೈ ಎತ್ತಿ. ಒಳ್ಳೆಯದು, ಸಾಹಸವನ್ನು. ಇಡುವುದು ಸಹ ಒಳ್ಳೆಯ ಮಾತಾಗಿದೆ. ಆದರೆ ಕೇವಲ ಈಗ ಸಾಹಸವನ್ನು ಇಡಬೇಡಿ, ಬಾಪ್‌ದಾದಾರವರ ಸಮ್ಮುಖದಲ್ಲಿದ್ದೆವು . ಆದ್ದರಿಂದ ಸಾಹಸವಿತ್ತು(ಧೈರ್ಯ) ಕೆಳಗೆ ಇಳಿಯುತ್ತಲೇ ಸ್ವಲ್ಪ ಧೈರ್ಯ ಕಡಿಮೆಯಾಗಿ ಬಿಟ್ಟಿತು ಹಾಗೂ ತಮ್ಮ ದೇಶದಲ್ಲಿ ಹೋಗುತ್ತಲೇ ಮತ್ತಷ್ಟು ಕಡಿಮೆಯಾಗಿ ಬಿಟ್ಟಿತು. ಯಾವುದೋ ಮಾತು ಬಂತು ಮತ್ತಷ್ಟು ಧೈರ್ಯ ಕಡಿಮೆಯಾಗಿ ಬಿಟ್ಟಿತು, ಹೀಗಂತೂ ಹೇಳುವುದಿಲ್ಲ ಅಲ್ಲವೇ? ನೋಡಿ ಯಾವಾಗ ಯಾವುದೇ ಕಾರಣ ಸಮ್ಮುಖ ಬರುತ್ತದೆ ಎಂದರೆ ಇನ್ನಷ್ಟು ಕಾರಣದ ಕಾರಣ ಧೈರ್ಯ ಕಡಿಮೆಯಾಗಿ ಬಿಡುತ್ತದೆ. ಬಲಹೀನತೆ ಬರುತ್ತದೆ ಹಾಗೂ ಯಾವಾಗ ಆ ಮಾತು ಸಮಾಪ್ತಿಯಾಗುತ್ತದೆಯೋ ಆಗ ತನ್ನ ಮೇಲೆ ನಾಚಿಕೆಯಾಗುತ್ತದೆ ಅಲ್ಲವೇ! ತನ್ನ ಮೇಲೆಯೇ ಸಂಕೋಚವಾಗುತ್ತದೆ ಇದು ನಾನು ಸರಿ ಮಾಡಿಲ್ಲ. ಮಾಡಿಬಿಟ್ಟು ನಂತರ ಪಶ್ಚಾತಾಪ ಮಾಡುವುದು. ಇದು ನಿಮ್ಮ ಪ್ರಜೆಯ ಕೆಲಸವಾಗಿದೆಯೇ ಅಥವಾ ನಿಮ್ಮ ಕೆಲಸವಾಗಿದೆಯೇ? ಪಶ್ಚಾತ್ತಾಪದವರು ರಾಜರಾಗುವರೇ? ಎಂದ ಮೇಲೆ ಯೋಚಿಸಿ ಸಾಕ್ಷಿ ಸ್ಥಿತಿಯ ಸಿಂಹಾಸನದ ಮೇಲೆ ಕುಳಿತುಕೊಳ್ಳಿ ಹಾಗೂ ನಿಮ್ಮನ್ನು ನೀವೇ ಜಡ್ಜ್(ನಿರ್ಣಯ) ಮಾಡಿ. ತಮ್ಮ ಜಡ್ಜ್(ನ್ಯಾಯಾಧೀಶ) ಆಗಿ, ಬೇರೆಯವರ ನ್ಯಾಯಾಧೀಶ ಅಲ್ಲ ಬೇರೆಯವರ ನ್ಯಾಯಾಧೀಶರಾಗುವುದು ಎಲ್ಲರಿಗೂ

ಬರುತ್ತದೆ. ಅನ್ಯರ ನ್ಯಾಯಾಧೀಶರಾಗಿ ಬಹಳ ಬೇಗ ಆಗುವಿರಿ ಹಾಗೂ ತಮ್ಮ ವಕೀಲರಾಗುವಿರಿ ಸಾಕ್ಷಿತನದ ಸಿಂಹಾಸನದ ಮೇಲೆ ತಮ್ಮ ನಿರ್ಣಯ ಬಹಳ ಸರಿಯಾಗಿರುತ್ತದೆ. ಸಿಂಹಾಸನದ ಕೆಳಗಡೆ ಇಳಿದು ನಿರ್ಣಯ ಮಾಡಿದಾಗ ಆ ನಿರ್ಣಯ ಸರಿಯಾಗಿರುವುದಿಲ್ಲ. ಸೆಕೆಂಡಿನಲ್ಲಿ ಸಿಂಹಾಸನಾಧಿಕಾರಿಯಾಗಿಬಿಡಿ. ಈ ಸ್ಥಿತಿ ನಿಮ್ಮ ಸಿಂಹಾಸನವಾಗಿದೆ. ಯಥಾರ್ಥ ಸಹಜ ನಿರ್ಣಯದ ಸಿಂಹಾಸನವಿದು, ಸಾಕ್ಷಿತನದ ಸ್ಥಿತಿಯಾಗಿದೆ. ಸಾಕ್ಷಿಯಾಗಿರುವುದಿಲ್ಲ ಎಂದರೆ ಅನ್ಯರ ಮಾತು, ಅನ್ಯರ ಚಲನೆ ಬಹಳ ಸಮ್ಮುಖದಲ್ಲಿ ಬರುತ್ತದೆ. ತನ್ನ ಚಲನೆ ಸಮ್ಮುಖದಲ್ಲಿ ಬರುವುದಿಲ್ಲ. ಒಂದು ವೇಳೆ ಸಾಕ್ಷಿಯಾಗಿ ನೋಡಿದಾಗ ತಮ್ಮದೂ ಕಾಣಿಸುತ್ತದೆ ಹಾಗೂ, ಅನ್ಯರದ್ದು ಸಹ ಕಾಣಿಸುತ್ತದೆ. ನಂತರ ಯಾವ ನಿರ್ಣಯ ಮಾಡುವಿರೋ ಅದು ಯಥಾರ್ಥವಾಗಿರುವುದು. ಇಲ್ಲವಾದರೆ ಯಥಾರ್ಥವಾಗಿರುವುದಿಲ್ಲ.

ಬಾಪ್‌ದಾದರವರು ಮೊದಲೂ ಸಹ ತಿಳಿಸಿದ್ದರು- ಡ್ರಾಮದಲ್ಲಿ ಏನೆಲ್ಲಾ ಮಾತುಗಳು ಬರುತ್ತವೆಯೋ ಆ ಮಾತುಗಳಲ್ಲಿ ಬಹಳ ಒಳ್ಳೆಯ ಬುದ್ಧಿವಂತಿಕೆ ಇದೆ ಆದರೆ ಕೆಲವೊಮ್ಮೆ ಬ್ರಾಹ್ಮಣ ಮಕ್ಕಳಲ್ಲಿ ಬುದ್ಧಿವಂತಿಕೆ ಕಡಿಮೆಯಾಗಿ ಬಿಡುತ್ತದೆ. ಮಾತು ಬರುತ್ತದೆ ಹಾಗೂ ಹೊರಟು ಹೋಗುತ್ತದೆ, ಆದರೆ ಬ್ರಾಹ್ಮಣ ಮಕ್ಕಳು ಮಾತನ್ನು ಹಿಡಿದುಕೊಂಡು ಕುಳಿತುಬಿಡುತ್ತಾರೆ. ಮಾತು ನಿಲ್ಲುವುದಿಲ್ಲ. ಹೊರಟು ಹೋಗುತ್ತದೆ ಆದರೆ ಸ್ವಯಂ ಮಾತನ್ನು ಬಿಡುವುದಿಲ್ಲ ಎಂದ ಮೇಲೆ ಮಾತಿನಲ್ಲಿ ಬುದ್ಧಿವಂತಿಕೆ ಬಹಳ ಇದೆಯೇ ಅಥವಾ ಬ್ರಾಹ್ಮಣರಲ್ಲಿದೆಯೇ? ಮಾತುಗಳೇ ಬುದ್ಧಿವಂತವಾಯಿತು ಅಲ್ಲವೇ! ಕೆಲವು ಮಕ್ಕಳು ಹೇಳುತ್ತಾರೆ ಎರಡು ದಿನಗಳಿಂದ ಈ ಮಾತು ನಡೆಯುತ್ತಿದೆ. ಎರಡು ಗಂಟೆ ಈ ಮಾತು ನಡೆಯಿತು ಹಾಗೂ ಎರಡು ಗಂಟೆಯಲ್ಲಿ ಎಷ್ಟು ಕಳೆದುಕೊಂಡಿರಿ? ಎರಡು ದಿನಗಳಲ್ಲಿ ಎಷ್ಟು ಕಳೆದುಕೊಂಡಿರಿ? ಆದ್ದರಿಂದ ಬುದ್ಧಿವಂತರಾಗಿ.

ಏನನ್ನು ಕೇಳಿದ್ದೀರಿ! ಮೊದಲ ಹೆಜ್ಜೆ ಆಜ್ಞಾಕಾರಿ, ನಾನು ಎಷ್ಟು ಆಜ್ಞಾಕಾರಿಯಾಗಿದ್ದೇನೆ ಎಂದು ನೋಡಿಕೊಳ್ಳಿರಿ. ಆಜ್ಞಾಕಾರಿಯ ಗುರುತುಗಳನ್ನು ತಿಳಿಸಿದ್ದೇನೆ. ಈ ಗುರುತುಗಳ ಆಧಾರದಿಂದ ನಿಮ್ಮನ್ನು ನೀವು ಪರಿಶೀಲಿಸಿಕೊಳ್ಳಿರಿ. ಇದು ಕಾರಣ, ಇದು ಕಾರಣ ಎಂಬುದನ್ನು ಸಮಾಪ್ತಿ ಮಾಡಿರಿ. ಮೊದಲ ಹೆಜ್ಜೆ ಆಜ್ಞಾಕಾರಿ ಮತ್ತು ಎರಡನೆಯ ಹೆಜ್ಜೆ ಸರ್ವಸ್ವ(ಸರ್ವಂಶ)ತ್ಯಾಗಿ. ಮೊದಲು ಆಜ್ಞಾಕಾರಿಯಾದ ಕಾರಣದಿಂದ ಆಶೀರ್ವಾದಗಳು ಲಭಿಸುತ್ತವೆ. ಆಶೀರ್ವಾದಗಳ ಆಧಾರದಿಂದ ಸರ್ವಸ್ವತ್ಯಾಗಿಯಾದರು. ಬ್ರಹ್ಮಾತಂದೆ ತ್ಯಾಗದಲ್ಲಿ ಕೂಡ ನಂಬರ್‌ವನ್ ಉದಾಹರಣೆಯಾದರು. ದೇಹ ಸಂಬಂಧಗಳ ತ್ಯಾಗವನ್ನು ಮಾಡುವುದು ದೊಡ್ಡ ವಿಷಯವೇನಲ್ಲ ಆದರೆ ದೇಹದ ಹಳೆಯ ಸ್ವಭಾವ ಸಂಸ್ಕಾರಗಳ ತ್ಯಾಗ ಕೂಡ ತಪ್ಪದೇ ಮಾಡಬೇಕು. ಸಂಬಂಧಿಕರ ತ್ಯಾಗವಂತು ಇತರ ಧರ್ಮದವರು ಕೂಡ ಮಾಡುತ್ತಾರೆ ಆದರೆ ಸ್ವಭಾವ ಸಂಸ್ಕಾರಗಳನ್ನು ಸರ್ವ ವಂಶಸಹಿತವಾಗಿ ತ್ಯಾಗ ಮಾಡಬೇಕು. ಕೇವಲ ತ್ಯಾಗವಲ್ಲ ಸರ್ವ ವಂಶ, ಅಂಶ ಕೂಡ ಇರಬಾರದು ಅವರನ್ನೇ ಸರ್ವಸ್ವ(ಸರ್ವಾಂಶ)ತ್ಯಾಗಿ ಎಂದು ಕರೆಯುತ್ತಾರೆ. ಒಂದು ವೇಳೆ ಅಂಶ ಮಾತ್ರವಾಗಿ ಉಳಿದುಕೊಂಡರೂ, ದೇಹದ ಸ್ವಭಾವ ಸಂಸ್ಕಾರಗಳು ಉಳಿದುಕೊಂಡರೂ ಅದು ಸಮಯಾನುಸಾರ ವಂಶವಾಗಿ ಬೆಳೆದುಬಿಡುತ್ತದೆ. ಆ ವಂಶ ಬಹಳ ತೇಜವಂತವಾಗಿ ಇರುತ್ತದೆ. ಹೇಗಾದರೆ ಲೌಕಿಕ ಪರಿವಾರದಲ್ಲಿ ನೋಡುತ್ತಿರಲ್ಲವೇ ದೊಡ್ಡವರು, ವೃದ್ಧರು ಬಹಳ ಶೀತಲವಾಗಿರುತ್ತಾರೆ ಆದರೆ ಮೊಮ್ಮಕ್ಕಳು ಬಹಳ ತೇಜವಂತವಾಗಿ ಇರುತ್ತಾರೆ. ಒಂದು ವೇಳೆ

ಯಾವುದಾದರು ಹಳೆಯ ವಂಶ ಉಳಿದುಕೊಂಡರೆ ಅದು ಕೂಡ ವಿರುದ್ಧವಾದ ಅದ್ಭುತ ಮಾಡಿ ತೋರಿಸುತ್ತದೆ. ಬಾಪ್‌ದಾದಾ ನೋಡುತ್ತಿದ್ದಾರೆ ಆ ಸಮಯದಲ್ಲಿ ಪರಿಸ್ಥಿತಿ ಹೇಗಿರುತ್ತದೆ ಎಂದರೆ ಪ್ರಪಂಚದಲ್ಲಿರುವವರು ಯಾರಾದರೂ ದಿವಾಳಿಯೆದ್ದರೆ ಕ್ಷಣದಲ್ಲಿ ಲಕ್ಷಾಧಿಕಾರಿಗಳಿಂದ ಭಿಕ್ಷಾಧಿಕಾರಿಗಳಾಗಿ ಬಿಡುತ್ತಾರೆಯಲ್ಲವೇ. ಹಾಗೆಯೇ ಇಲ್ಲಿ ಕೂಡ ಒಂದು ಕ್ಷಣದಲ್ಲಿ ಸರ್ವಖಜಾನೆಗಳು ಸಮಾಪ್ತಿಯಾಗಿ ಬಿಡುತ್ತವೆ. ನಂತರ ಶ್ರಮ ಮಾಡಬೇಕಾಗಿ ಬರುತ್ತದೆ ಆದ್ದರಿಂದ ಸರ್ವಸ್ವತ್ಯಾಗಿ ಅರ್ಥಾತ್ ದೇಹದ ಸಂಬಂಧೀಕರು, ದೇಹದ ಹಳೆಯ ಸ್ವಭಾವ, ಸಂಸ್ಕಾರಗಳಿಂದ ತ್ಯಾಗಿ ಆಗಬೇಕು. ಯಾವಾಗಲಾದರೂ ನಿಮ್ಮ ಸ್ಥಿತಿಯನ್ನು ಪರಿಶೀಲಿಸಿಕೊಳ್ಳಿರಿ. ಮೋಸ ಹೋಗುತ್ತಿದ್ದೀರಿ ಅರ್ಥಾತ್ ಯಾವುದು ಮೋಸ ಮಾಡುತ್ತಿದೆ. ಸ್ವಭಾವ ಸಂಸ್ಕಾರಗಳೇ ಅಲ್ಲವೇ? ಈ ಸ್ವಭಾವ ಸಂಸ್ಕಾರಗಳೇ ತ್ಯಾಗದ ಭಾಗ್ಯವನ್ನು ಕೂಡ ಸಮಾಪ್ತಿ ಮಾಡಿಬಿಡುತ್ತವೆ. ಆದ್ದರಿಂದ ಬಾಪ್‌ದಾದಾ ಬ್ರಾಹ್ಮಣರಿಗೆ ಇನ್ನೂ ಅಂಡರ್ ಲೈನ್ ಮಾಡಿಸುತ್ತಿದ್ದಾರೆ. ತ್ಯಾಗವನ್ನು ಕೂಡ ತ್ಯಾಗ ಮಾಡಿರಿ, ನಾನು ತ್ಯಾಗಿ ಎಂಬ ಅಭಿಮಾನವನ್ನು ಕೂಡ ತ್ಯಾಗ ಮಾಡಿರಿ, ಇದನ್ನೇ ತ್ಯಾಗವನ್ನು ಕೂಡ ತ್ಯಾಗ ಮಾಡುವುದು ಎಂದು ಕರೆಯುತ್ತಾರೆ. ನಾನು ಮಾಡಿದ್ದೇನೆ, ಸಹಿಸಿದ್ದೇನೆ, ಇದನ್ನು ಮಾಡಿದ್ದೇನೆ, ಅದನ್ನು ಮಾಡಿದ್ದೇನೆ ಎಂದು ಕಥೆಗಳನ್ನು ಹೇಳಬೇಡಿರಿ. ಒಂದು ವೇಳೆ ಯಾರಾದರೂ ಸಹಿಸಿದರು ಎಂದರೆ ಸಹನೆ ಎಂದಾಗ ನಂತರ ಏನೆನ್ನುತ್ತೀರಿ? ಶಕ್ತಿ ಎನ್ನುತೀರಲ್ಲವೇ ಆದ್ದರಿಂದ ಸಹನೆ ಅರ್ಥಾತ್ ಕೇವಲ ಸಹಿಸುವುದಲ್ಲ, ಸಹಿಸುವುದು ಎಂದರೆ ಶಕ್ತಿಯನ್ನು ಧಾರಣೆ ಮಾಡುವುದು ಆದ್ದರಿಂದ ಸಹನೆಶಕ್ತಿ ಎಂದು ಕರೆಯುತ್ತಾರೆ. ಸಹಿಸುವುದು ಅರ್ಥಾತ್ ಶಕ್ತಿ ರೂಪದ ಪ್ರತ್ಯಕ್ಷ ರೂಪವನ್ನು ತೋರಿಸುವುದು. ಒಳ್ಳೆಯದೇ ಆಯಯಿತಲ್ಲವೇ? ಏನು ಸಹಿಸಿದಿರಿ, ಇನ್ನೂ ಲಾಭವನ್ನೇ ಪಡೆದಿರಲ್ಲವೇ ಮತ್ತು ಯಾರಿಗಾಗಿ ಸಹಿಸಿದಿರಿ, ತಂದೆಯ ಆಜ್ಞಾಕಾರಿಯಾಗಲು ಸಹಿಸಿದಿರಿ. ಇತರರ ಸಲುವಾಗಿ ಸಹಿಸಲಿಲ್ಲ ತಂದೆಯ ಆಜ್ಞೆಯನ್ನು ಪಾಲಿಸಿದಿರಿ. ಆಗ ಆಶೀರ್ವಾದಗಳು ಸಿಗುತ್ತವೆಯಲ್ಲವೇ ಆದ್ದರಿಂದ ಏನು ಸಹಿಸಿದಿರಿ ಆಶೀರ್ವಾದಗಳನ್ನು ಪಡೆದಿರಿ. ವಿಷಯವನ್ನು ಎದುರಿಗಿಟ್ಟುಕೊಂಡು ಬಹಳ ಬಹಳ ಸಹಿಸಿದೆವು ಎಷ್ಟರಮಟ್ಟಿಗೆ ಸಹಿಸುತ್ತೇವೆ, ಸಹಿಸಲು ಕೂಡ ಯಾವುದಾದರೂ ಒಂದು ಪರಿಧಿ(ಹದ್ದು) ಇರುತ್ತದೆ ಎಂದು ಯೋಚಿಸುತ್ತಿದ್ದೀರಿ. ಆದರೆ ಎಷ್ಟು ಬೆಹದ್ದಾಗಿ ಸಹಿಸುತ್ತೀರೋ ಅಷ್ಟೇ ಬೇಹದ್ ಆಶೀರ್ವಾದಗಳು ಲಭಿಸುತ್ತವೆ. ಏಕೆಂದರೆ ತಂದೆಯ ಆಜ್ಞಾಕಾರಿ ಆಗುತ್ತಿದ್ದೀರಿ. ತಂದೆ ಸಹಿಸಿರಿ ಎಂದು ಹೇಳಿದ್ದಾರೆ ಆದರೆ ಆಜ್ಞೆಯನ್ನು ಪಾಲಿಸುವುದು ಸಂತೋಷಕರವಾದ ವಿಷಯವೇ? ಅಥವಾ ಕಷ್ಟವಾದ ವಿಷಯವೇ? ಕಷ್ಟದಿಂದ ಸಹಿಸಬೇಡಿ. ಕೆಲವರು ಸಹಿಸುತ್ತಿದ್ದೇವೆ ಎಂದುಕೊಳ್ಳುತ್ತಿದ್ದಾರೆ. ಸಹಿಸುತ್ತಿದ್ದಾರೆ ಕೂಡ ಆದರೆ ನಾನು ಸಹಿಸಿದಷ್ಟು ಇನ್ಯಾರು ಸಹಿಸುವುದಿಲ್ಲ ಎನ್ನುತ್ತಿದ್ದಾರೆ ಮತ್ತು ದಾದಿಯವರ ಹತ್ತಿರ ಹೋಗಿ ಹೇಳುತ್ತಿದ್ದಾರೆ ನಾವು ಎಷ್ಟು ಸಹಿಸಿದ್ದೇವೆಯೋ ನಿಮಗೆ ತಿಳಿದಿಲ್ಲ ಎಂದು. ಆದರೆ ಸಹಿಸುವುದರಿಂದ ನಷ್ಟವೇನಿದೆ ಲಾಭವನ್ನೇ ಪಡೆದಿರಲ್ಲವೇ?

ತ್ಯಾಗದ ಪರಿಭಾಷೆ ಅರ್ಥವಾಯಿತೇ, ಭಕ್ತಿ ಮಾರ್ಗದಲ್ಲಿ ಕೂಡ ಬಲಿಯನ್ನು ಕೊಡುತ್ತಿರುವಾಗ ಬಲಿ ಕೊಡುವ ಪ್ರಾಣಿ ಚೀರಾಡಿದರೆ ಅದನ್ನು ಪ್ರಸಾದವಾಗಿ ಭಾವಿಸುವುದಿಲ್ಲ. ಚೀರಾಡದೇ ಒಂದೇ ಏಟಿಗೆ ಸ್ವಾಹ ಆಗಿಬಿಟ್ಟರೆ ಅದನ್ನು ಪ್ರಸಾದವಾಗಿ ಭಾವಿಸುತ್ತಾರೆ. ಬಲಿ ಕೊಡುವ ಪ್ರಾಣಿ ಕೂಡ ಚೀರಬಾರದು ಎಂದು ಹೇಳುತ್ತಾರೆ ಹಾಗೆಯೇ ನೀವು ಕೂಡ ಸಹಿಸಿದ್ದೇವೆ, ಸಹಿಸಿದ್ದೇವೆ ಎಂದು ಹೇಳುತ್ತಿದ್ದೀರಿ ಅದು ಕೂಡಾ ಚೀರಿದ ಹಾಗೆಯೇ ಅಲ್ಲವೇ. ಮನಸ್ಸಿನಿಂದಾದರೂ,

ಬಾಯಿಂದ ಆದರೂ, ಸ್ವಲ್ಪವಾದರೂ ಚಿರುತ್ತಿದ್ದೀರಿ ಎಂದರೆ ಅದು ಪ್ರಸಾದವಾಗುವುದಿಲ್ಲ. ಅದನ್ನು ಸ್ವೀಕರಿಸುವುದಿಲ್ಲವಲ್ಲವೇ, ಹಾಗೆಯೇ ಇಲ್ಲಿ ಕೂಡ ಸ್ವೀಕರಿಸುವುದಿಲ್ಲ. ತಂದೆ ಸ್ವೀಕರಿಸದಿದ್ದಾಗ ಆಶೀರ್ವಾದಗಳು ಹೇಗೆ ಕೊಡುತ್ತಾರೆ. ಈಗ ಏನು ಮಾಡುತ್ತೀರಿ ಸ್ವಲ್ಪ ಸ್ವಲ್ಪ ಹೊರಗಡೆ ಅಲ್ಲದೆ ಒಳಗಡೆ ಚೀರಾಡುತ್ತೀರಾ? ಹಾಗೆ ಚಿರಾಡುತ್ತೀರಾ? ಎದುರಿಗೆ ಟೀಚರ್ಸ್ ಇದ್ದಾರೆ ಯಾವ ಮೂಲೆಯಲ್ಲಾದರೂ ಸ್ವಲ್ಪ ಒಂದು, ಎರಡು ಕಣ್ಣೀರಿದೆಯೇ? ಬಾತ್ರೂಮ್ ನಲ್ಲಿ ಸ್ವಲ್ಪ ಕಣ್ಣೀರನ್ನು ಬಚ್ಚಿಟ್ಟಿದ್ದೀರಾ? ಇಲ್ಲ ತಾನೇ! ಮಾತೆಯರು ಮಕ್ಕಳು ಬೇಸರ ಮಾಡುತ್ತಿದ್ದರೆ ಏನು ಮಾಡುತ್ತೀರಿ? ಸ್ವಲ್ಪ ಮನಸ್ಸಿನಲ್ಲಿ ಅಳುತ್ತೀರಾ? ಮಾತೆಯರು ಮನಸ್ಸಿನಲ್ಲಿ ಅಳುತ್ತಿದ್ದೀರಾ? ಸ್ವಲ್ಪ ಸ್ವಲ್ಪವಾಗಿ ಅಳುತ್ತಿದ್ದೀರಾ? ಅಣ್ಣಂದಿರು ಏನು ಮಾಡುತ್ತಿದ್ದೀರಿ? ಅಣ್ಣಂದಿರು ಕಣ್ಣಿನಿಂದ ಅಳುತ್ತಿಲ್ಲ ಆದರೆ ಕ್ರೋಧದಿಂದ ಒಳಗಡೆ ಅಳುತ್ತಿದ್ದೀರಿ. ಆವೇಶ ಬರುವುದು ಕೂಡ ಅಳುವುದೇ. ಪಾಂಡವ ಸೇನೆ ಏನೆಂದು ಭಾವಿಸುತ್ತಿದ್ದೀರಿ? ಅಳಲು ಸ್ವಲ್ಪ ಅವಕಾಶ ಬೇಕೇ? ಯಾರಿಗೆ ಸ್ವಲ್ಪ ಅವಕಾಶ ಬೇಕೋ ಅವರು ಕೈಯನ್ನು ಎತ್ತಿರಿ. ಅವಸರವಿಲ್ಲವೇ? ಆದರೆ ಇಂದಿನಿಂದ ಅಳುವಂತಹ ಫೈಲ್ ಕೂಡ ಸಮಾಪ್ತಿಯಾಗಿ ಬಿಡುತ್ತದೆ ಅಲ್ಲವೇ ಅಥವಾ ಚಪ್ಪಾಳೆಯನ್ನು ತಟ್ಟಿ ಸಂತೋಷ ಪಡಿಸುತ್ತಿದ್ದೀರಾ? ಇಂದಿನಿಂದ ಪೋಸ್ಟ್ ಕೂಡ ಕಡಿಮೆಯಾಗಿ ಬಿಡುತ್ತದೆ. ಈ ಪೋಸ್ಟಿಗೆ ಆಗುವ ವ್ಯರ್ಥಖರ್ಚು ಕೂಡ ಜ್ಞಾನ ಸರೋವರದ ಸಲುವಾಗಿ ಜಮಾ ಆಗುತ್ತದೆ. ಇಂತಹ ವಿಷಯಗಳು ಯಾವುದಾದರೂ ಬಂದಾಗ ಆ ಪೋಸ್ಟಿಗೆ ಆಗುವ ಖರ್ಚುಗಳು ಬಂಡಾರದಲ್ಲಿ ಹಾಕಿಬಿಡಿ. ಜ್ಞಾನ ಸರೋವರದ ಸಲುವಾಗಿ ಈಗಲೂ ಕೂಡ ಧನ ವಿನಯೋಗಿಸಬೇಕಲ್ಲವೇ.

ಜ್ಞಾನ ಸರೋವರದ ಮೇಲೆ ಎಲ್ಲರಿಗೂ ಬಹಳ ಚೆನ್ನಾಗಿ ಪ್ರೀತಿ ಇದೆ. ಜ್ಞಾನ ಸರೋವರದೊಂದಿಗೆ ಪ್ರೀತಿ ಅರ್ಥಾತ್ ಸೇವೆಯೊಂದಿಗೆ ಪ್ರೀತಿ, ಸ್ಥಾನದೊಂದಿಗೆ ಪ್ರೀತಿ ಅಲ್ಲ ಆದರೆ ಸೇವೆಗೆ ನಿಮಿತ್ತವಾದ ಸ್ಥಾನವಾದ್ದರಿಂದ ಸೇವೆಯೊಂದಿಗೆ ಪ್ರೀತಿ ಇದ್ದ ಹಾಗೆ. ಇಲ್ಲಿ ಕುಳಿತಿರುವವರಲ್ಲಿ ಜ್ಞಾನ ಸರೋವರದ ಸಲುವಾಗಿ ನಯಾ ಪೈಸೆ ಕೂಡ ಹಾಕದವರು ಯಾರಾದರೂ ಇದ್ದೀರಾ? ಯಾರು ಇಲ್ಲ. ಯಾರಾದರೆ ಹಾಕಿರುವಿರೋ ಅವರು ಕೈಯನ್ನೆತ್ತಿರಿ. ಎಲ್ಲರೂ ಹಾಕಿರುವಿರಿ ಮಧುಬನ ನಿವಾಸಿಯರು ಹಾಕಿದ್ದೀರಾ? ಭಂಡಾರದಿಂದ ತೆಗೆದು ಹಾಕಿದ್ದೀರಾ, ಹಾಸ್ಪಿಟಲ್ ರವರು ಹಾಕಿದ್ದೀರಾ? ಕೈಯನ್ನು ಎತ್ತಿರಿ. ಕೆಳಗೆ ಕುಳಿತಿರುವವರು ಕೂಡ ಹಾಕಿದ್ದಾರೆ. ಸೇವಾಧಾರಿಗಳು ಕೂಡ ಹಾಕಿದ್ದಾರೆ. ಅವರು ಕೂಡ ಕೆಳಗಡೆಯೇ ಕುಳಿತಿದ್ದಾರೆ .ಎಲ್ಲರ ಸಹಯೋಗದಿಂದ ಎಷ್ಟು ಒಳ್ಳೆಯ ಸೇವಾಸ್ಥಾನ ತಯಾರಾಯಿತು ನೋಡಿರಿ. ಎಲ್ಲರಿಗೂ ಚೆನ್ನಾಗಿದೆಯೇ? ಎಲ್ಲರೂ ನೋಡಿದ್ದೀರಲ್ಲವೇ? ಇಷ್ಟವಾಯಿತೇ ಇಲ್ಲಿ ಇರುವುದಕ್ಕೆ ಸ್ವಲ್ಪ ಕಷ್ಟ ಪಡಬೇಕಾಯಿತು. ಅದು ಕೂಡ ಸರಿ ಹೋಗುತ್ತದೆ. ಮತ್ತೆ ಬರುವಷ್ಟರಲ್ಲಿ ಮಜಾದಿಂದ ಇರುತ್ತೀರಿ. ಈಗಂತೂ ಆಗಾಗ ಬಿಸಿನೀರಿಲ್ಲ, ಆಗಾಗ ತಣ್ಣೀರು ಇಲ್ಲ. ಹೊಸ ಮನೆಯಲ್ಲಿ ಇದ್ದೀರಿ ಎಲ್ಲರಿಗೂ ಖುಷಿಯಿದೆ ತಾನೇ? ಜ್ಞಾನ ಸರೋವರದಲ್ಲಿ ಇರುವವರೆಲ್ಲರೂ ಖುಷಿಯಿಂದ ಇದ್ದೀರಾ? ಯಾರು ಖುಷಿಯಿಂದ ಇರುವಿರೋ ಅವರು ಕೈಯನ್ನೇತ್ತಿರಿ. ಪಾಂಡವರು ಬಹಳಷ್ಟು ಜನ ಇದ್ದಾರೆ. ಶಕ್ತಿಯರೂ ಕೂಡ ಇದ್ದಾರೆ. ಹೇಳಿದ್ದೇನಲ್ಲವೇ ಏನಾದರೂ ಆಗಲಿ ಈಗ ನೀವು ಬಹಳ ಬಹಳ ಭಾಗ್ಯವಂತರು. ಭಕ್ತಿ ಮಾರ್ಗದ ಮೇಳದಲ್ಲಿ ಮಣ್ಣಿನ ಮೇಲೆ ಮಲಗುತ್ತೀರಿ. ಇಲ್ಲಂತೂ ಹಾಸಿಗೆ ಮತ್ತು ರಜಾಯಿ ಸಿಕ್ಕಿದೆಯಲ್ಲವೇ. ಆದರೂ ಚಳಿ ಬಹಳ ಜಾಸ್ತಿಯಿದೆಯಲ್ಲವೇ? ಮುದುರಿಕೊಂಡು ಮಲಗಬಾರದು. ಎಲ್ಲರೂ ಸೇರಿ ಮಲಗಿದಾಗ ಇನ್ನೂ ಬಿಸಿಯ ವಾತಾವರಣ ಇರುತ್ತದೆ. ತಂದೆ ಎಲ್ಲಾ ಕಡೆ ತಿರುಗಾಡಿದರು.

ಚೆನ್ನಾಗಿ ಅನಿಸಿತು ಎಲ್ಲರೂ ಚೆನ್ನಾಗಿ ಮಲಗಿದ್ದೀರಿ. ಹೊಸ ಮಂಚಗಳು, ಹೊಸಮನೆ. ಆದರೂ ನೋಡಿರಿ ಇಷ್ಟು ಜನಕ್ಕೆ ಬರುವಂತಹ ಅವಕಾಶ ಸಿಕ್ಕಿದೆ ಅಲ್ಲವೇ, ಒಳ್ಳೆಯದು. ದಾದಿಯವರಿಗೆ ಜ್ಞಾನ ಸರೋವರ ಇಷ್ಟವೇ ತಾನೇ!

ಜ್ಞಾನ ಸರೋವರದಲ್ಲಿ ಎರಡು ಲಕ್ಷ್ಯಗಳು ಇವೆ. 1.ವಿಶೇಷ ಸೇವೆ, 2.ಬ್ರಾಹ್ಮಣರ ಸೌಕರ್ಯಾರ್ಥವಾಗಿ. ಎರಡು ಲಕ್ಷ್ಯಗಳಿಂದ ಈ ವಿಧವಾಗಿ ತಯಾರು ಮಾಡಲಾಗಿದೆ. ಪಾಂಡವ ಭವನದಲ್ಲಾದರೆ ಬ್ರಾಹ್ಮಣಾತ್ಮರನ್ನು ಅಲ್ಲದೆ ಬೇರೆ ಯಾರನ್ನು ಬರಲು ಬಿಡುವುದಿಲ್ಲವಲ್ಲ ಆದರೆ ಅಲ್ಲಿ ಅನೇಕ ಜನ ಸಂಪರ್ಕದಲ್ಲಿರುವವರು ಸಮೀಪ ಸಂಬಂಧದಲ್ಲಿ ಬರುತ್ತಾರೆ. ಈಶ್ವರೀಯ ವಿಶ್ವವಿದ್ಯಾಲಯ ಎಂದು ಯಾವ ಹೆಸರಾದರೆ ಇದೆಯೋ ಆ ವಿದ್ಯಾಲಯದ ಹೆಸರನ್ನು ಕೂಡ ಪ್ರತ್ಯಕ್ಷ ಮಾಡುತ್ತಾರೆ. ಅರ್ಥಾತ್ ಡಬಲ್ ಸೇವೆ ಅಲ್ಲವೇ? ಪಾಂಡವ ಭವನ ಬ್ರಾಹ್ಮಣರ ಸಲುವಾಗಿ ತಯಾರು ಮಾಡಿದ್ದಾರೆ ಆದರೆ ಜ್ಞಾನ ಸರೋವರ ವಿಶ್ವದಲ್ಲಿರುವ ಸರ್ವಾತ್ಮರಿಗಾಗಿ ತಯಾರು ಮಾಡಿದ್ದಾರೆ ಆದ್ದರಿಂದ ಅಂತರವಿದೆಯಲ್ಲವೇ. ಲಕ್ಷ್ಯದಲ್ಲಿ ಕೂಡ ಅಂತರವಿದೆಯಲ್ಲವೇ. ಒಳ್ಳೆಯದು.

ಇನ್ನೂ ಉಳಿದಿರುವ ಹೆಜ್ಜೆಗಳ ಬಗ್ಗೆ ನಂತರ ಹೇಳುತ್ತೇನೆ ಆದರೆ ಈ ಎರಡು ಹೆಜ್ಜೆಗಳಲ್ಲಿ ಚೆನ್ನಾಗಿ ಪರಿಶೀಲನೆ ಮಾಡಿಕೊಳ್ಳಬೇಕು ಮತ್ತು ಇಡೀ ಫೈಲ್ಸ್‌ಅನ್ನು ಸಮಾಪ್ತಿ ಮಾಡಬೇಕು. ಮರೆಯಬಾರದು ಯಾವ ಫೈಲ್ಸ್? ಕಾರಣಗಳ ಫೈಲ್ಸ್ ಮತ್ತು ಅಳುವ ಫೈಲ್ಸ್. ಆವೇಶದಲ್ಲಿ ಬರುವುದು ಕೂಡ ಅಳುವುದೇ ಆಗಿದೆ. ಆವೇಶದಲ್ಲಿ ಬರುವುದು ಎನ್ನುವುದು ಮನಸ್ಸಿನ ಅಳು ಆಗಿದೆ. ನಾವು ಬಹಳ ಅಳುತಿಲ್ಲವಲ್ಲ ಎಂದುಕೊಳ್ಳುತ್ತಿದ್ದೀರಿ ಆದರೆ ಮನಸ್ಸಿನಿಂದ ಬಹಳ ಅತ್ತುಬಿಟ್ಟಿದ್ದೀರಿ ಆದರೆ ಈ ಎರಡು ಫೈಲ್ಸ್ ಸಮಾಪ್ತಿ ಮಾಡಬೇಕು. ಸಮಾಪ್ತಿಯಾಗಿ ಬಿಟ್ಟಿದೆಯೇ? ಡಬಲ್ ವಿದೇಶಿಯರು ಹೇಳಿರಿ ಸಮಾಪ್ತಿಯಾಗಿದೆಯೇ? ನಿಮ್ಮ ಮೇಲೆ ನೀವು ಫೈನ್(ಶಿಕ್ಷೆ) ಹಾಕಿಕೊಳ್ಳಬಾರದು. ರಿಫೈನ್(ಪರಿಶುದ್ಧ)ವಾಗಬೇಕು.

ಬ್ರಹ್ಮಾ ತಂದೆ ತನ್ನ ಆದಿ ಸಹಯೋಗಿಗಳನ್ನು ನೋಡಿ ಖುಷಿಪಡುತ್ತಿದ್ದಾರೆ. ಸಹಯೋಗಿಗಳೇ ಅಲ್ಲವೇ ಟೀಚರ್ಸ್ ಎಲ್ಲರೂ ಸಹಯೋಗಿಗಳೇ ತಾನೆ! ಪಾಂಡವರು ಕೂಡ ಆದಿ ಸಹಯೋಗಿಗಳು ಮತ್ತು ಶಕ್ತಿಯರೂ ಕೂಡ ಸಹಯೋಗಿಗಳು. ಬಲ ಭುಜದಂತವರು ಆದ್ದರಿಂದಲೇ ಬ್ರಹ್ಮಾತಂದೆಗೆ ಬಹಳ ಭುಜಗಳನ್ನು ತೋರಿಸಿದ್ದಾರೆ. ಭುಜಗಳು ಅರ್ಥಾತ್ ಸಹಯೋಗಿಗಳು, ಜೊತೆ ಇರುವವರು ಎಲ್ಲರೂ ಬಲಭುಜಗಳೇ ತಾನೆ! ಎಡಭುಜಗಳು ಅಲ್ಲ ತಾನೇ! ಇಲ್ಲಿ ಎಡಭುಜ ಬಲಭುಜವಾಗಿ ಬಿಡುತ್ತದೆ. ಎಡಭುಜವನ್ನು ಕೂಡ ಎಡಭುಜ ಎಂದು ಕರೆಯುವುದಿಲ್ಲ. ಎಲ್ಲರೂ ಸಹಯೋಗಿಗಳೇ, ನಾಲ್ಕು ಕಡೆಯಿಂದ ಬಂದಿದ್ದೀರಿ ಹೆಸರುಗಳಂತೂ ಬಹಳ ಇರುತ್ತದೆ ಆದ್ದರಿಂದ ಡಬಲ್ ಅವಕಾಶ ಲಭಿಸಿದೆ. ಈ ಗ್ರೂಪಿಗೆ ಡಬಲ್ ಚಾನ್ಸ್ ಲಭಿಸಿದೆಯಲ್ಲವೇ!

ಒಂದಾಗಿದೆ ಭಾರತ ದೇಶದ ಸೇವೆಯಲ್ಲಿ ನಿಮಿತ್ತವಾದ ಎಲ್ಲಾ ಜೋನ್ಸ್ ನವರು ಬಂದಿದ್ದಾರೆ. ಭಾರತ ದೇಶದ ಸೇವಾಧಾರಿ ಮಕ್ಕಳಿಗೆ ಬಾಪ್‌ದಾದಾ ಸೇವೆಯ  ಶುಭಾಶಯಗಳನ್ನು ಕೊಡುತ್ತಿದ್ದಾರೆ ಮತ್ತು ಸದಾ ಸುಪುತ್ರರಾದವರಿಗೆ ಪ್ರಮಾಣ(ಸಾಕ್ಷಿ)ಯನ್ನು ತೋರಿಸುವ ಮಕ್ಕಳಿಗೆ ವಿಶೇಷವಾಗಿ ದಿವ್ಯಗುಣಗಳ ಆಭರಣದ ಸೆಟ್ಟನ್ನು ಬಹುಮಾನವಾಗಿ ಕೊಡುತ್ತಿದ್ದಾರೆ. ಸುಪುತ್ರರ ಗುರುತು ಪ್ರಮಾಣವನ್ನು ತೋರಿಸಬೇಕು ಮತ್ತು ಪ್ರತ್ಯಕ್ಷ ಸಾಕ್ಷಿಯನ್ನು ತೋರಿಸಬೇಕು.

ಸುಪುತ್ರರಾದವರು ತಮ್ಮ ಪ್ರಮಾಣವನ್ನು ಸೇವೆಯ ಪ್ರತ್ಯಕ್ಷ ಫಲದಿಂದ ತೋರಿಸುತ್ತಿದ್ದಾರೆ ಮತ್ತು ಇನ್ನು ಮುಂದೆ ಕೂಡ ತೋರಿಸುತ್ತಾ ಇರುತ್ತಾರೆ ಆದ್ದರಿಂದ ಸುಪುತ್ರರಾದ ಮಕ್ಕಳಿಗೆ ಬಾಪ್‌ದಾದಾ, ತಾಯಿ ಸದಾ ಶ್ರೇಷ್ಠಾತಿಶ್ರೇಷ್ಠವಾಗಿ ಶೃಂಗಾರವನ್ನು ಮಾಡುತ್ತಿದ್ದಾರೆ, ಅಲಂಕರಿಸುತ್ತಿದ್ದಾರೆ. ಒಳ್ಳೆಯ ಮಕ್ಕಳಿಗೆ ಸದಾ ಶ್ರೇಷ್ಠವಾದ ವಸ್ತುಗಳನ್ನು ಕೊಡುತ್ತಾರೆ. ಇಲ್ಲಂತೂ ಎಲ್ಲರೂ ಒಬ್ಬರಿಗಿಂತ ಒಬ್ಬರು ಶ್ರೇಷ್ಠವಾದವರು. ಆದ್ದರಿಂದ ಬಾಪ್‌ದಾದಾ ಈ ವಿಧವಾಗಿ ಸುಪುತ್ರರಿಗೆ ಮತ್ತು ಪ್ರಮಾಣ ಕೊಡುವವರಿಗೆ ವಿಶೇಷವಾಗಿ ದಿವ್ಯಗುಣಗಳ ಆಭರಣದ ಸೆಟ್ಟನ್ನು ಉಡುಗೊರೆಯಾಗಿ ಕೊಡುತ್ತಿದ್ದಾರೆ. ಈ ಉಡುಗೊರೆಯನ್ನು ಬಹಳ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ಕಿವಿಗಳಿಗೆ ಕೂಡ ಇಟ್ಟುಕೊಳ್ಳಬೇಕು ಮತ್ತು ಮಸ್ತಕದಲ್ಲಿ ಕೂಡ ಇಟ್ಟುಕೊಳ್ಳಬೇಕು, ತಲೆಯ ಮೇಲೆ ಕಿರೀಟ ಕೂಡ ಇರಬೇಕು. ತೆಗೆಯಬಾರದು, ಮಾಯೆ ಅದನ್ನು ಕಳ್ಳತನ ಮಾಡಲು ಬಿಡಬಾರದು. ಇವರಿಗೆ ಉಡುಗೊರೆ ಸಿಗುತ್ತದೆ ಎಂದು ಮಾಯೆಗೆ ಕೂಡ ತಿಳಿದಿದೆ. ಆದ್ದರಿಂದ ಡಬಲ್ ಕೀಲಿಯನ್ನು ಹಾಕಿದ್ದೀರಾ? ಸ್ಮೃತಿ ಮತ್ತು ಸೇವೆ ಎರಡರಲ್ಲಿ ಸಮಾನತೆ ಸದಾ ಇರಬೇಕು ಮತ್ತು ಡಬಲ್ ಕೀಲಿ ಹಾಕಬೇಕು. ಎಲ್ಲರ ಹತ್ತಿರ ಡಬಲ್ ಕೀಲಿ ಇದೆಯೇ ಅಥವಾ ಒಂದೇ ಕೀಲಿ ಚೆನ್ನಾಗಿದ್ದು ಇನ್ನೊಂದು ಕೀಲಿ ಬಲಹೀನವಾಗಿದೆಯೇ? ಕೀಲಿ ಹೋಗಲಿಲ್ಲ ತಾನೇ ಎಂದು ನೋಡಿಕೊಳ್ಳಬೇಕು. ನೀವು ಕೀಲಿ ಕೈ ಬಹಳ ಸುರಕ್ಷಿತವಾಗಿ ಇದೆ ಎಂದುಕೊಳ್ಳುತ್ತಿದ್ದೀರಿ ಆದರೆ ಅವಸರಕ್ಕೆ ಅದು ಕಾಣಿಸುತ್ತಿಲ್ಲ. ಹೀಗಿಲ್ಲವಲ್ಲ? ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಬಾಪ್ ದಾದಾರವರ ಸ್ನೇಹವನ್ನು ಪ್ರತ್ಯಕ್ಷ ಮಾಡುವಂತಹ, ಶ್ರೇಷ್ಠ ಆತ್ಮರಿಗೆ, ಸದಾ ಬಾಪ್‌ದಾದಾರವರ ಹೆಜ್ಜೆಯ ಮೇಲೆ ಹೆಜ್ಜೆ ಇಡುವಂತಹ ಆಜ್ಞಾಕಾರಿ ಶ್ರೇಷ್ಠ ಆತ್ಮರಿಗೆ, ಸದಾ ದೃಢ ಸಂಕಲ್ಪದ ಮೂಲಕ ಬ್ರಹ್ಮಾ ತಂದೆಯ ಸಮಾನ ಸರ್ವಸ್ವ ತ್ಯಾಗಿ ವಿಶೇಷ ಆತ್ಮರಿಗೆ, ಸದಾ ಸುಪುತ್ರರಾಗಿ ಪ್ರತಿ ಸಮಯ ಉದಾಹರಣೆಯನ್ನು ಕೊಡುವಂತಹ ಸುಪುತ್ರ ಅತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 19-01-1995.

***ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಆಜ್ಞಾಕಾರಿ ಹಾಗೂ ಸರ್ವಾಂಶ(ಸರ್ವಸ್ವ) ತ್ಯಾಗಿಯಾಗಿರಿ.***

ಬ್ರಹ್ಮಾ ತಂದೆಯ ಮೊದಲ ಹೆಜ್ಜೆ ಆಜ್ಞಾಕಾರಿಯಾದರು, ಅಮೃತ ವೇಳೆಯಿಂದ ರಾತ್ರಿ ಮಲಗುವವರೆಗೆ ಮನಸಾ, ವಾಚಾ, ಕರ್ಮಣಾ, ಸಂಬಂಧ ಸಂಪರ್ಕದಲ್ಲಿ ಯಾವ ಆಜ್ಞೆ ಸಿಕ್ಕಿದೆಯೋ ಅದರ ಪ್ರಮಾಣ ನಡೆಯುತ್ತಿದ್ದೇನೆಯೇ ಎಂದು ಪರಿಶೀಲಿಸಿಕೊಳ್ಳಿರಿ. ಆಜ್ಞಾಕಾರರು ತಂದೆ ಮತ್ತು ಬ್ರಾಹ್ಮಣ ಪರಿವಾರದ ಆಶೀರ್ವಾದಗಳನ್ನು ಸ್ವತಹವಾಗಿ ಪಡೆಯುತ್ತಾರೆ ಮತ್ತು ಅವರು ಹೃದಯದಿಂದ ಸದಾ ಸಂತುಷ್ಟವಾಗಿರುತ್ತಾರೆ. ಬ್ರಹ್ಮಾ ತಂದೆಯ ಎರಡನೇ ಹೆಜ್ಜೆ ಸರ್ವಾಂಶ(ಸರ್ವಸ್ವ) ತ್ಯಾಗಿ. ದೇಹ ಸಂಬಂಧಿಕರ ತ್ಯಾಗವೆಂಬುದು ದೊಡ್ಡ ವಿಷಯವೇನಲ್ಲ ಆದರೆ ದೇಹದ ಹಳೆಯ ಸ್ವಭಾವ, ಸಂಸ್ಕಾರಗಳ ತ್ಯಾಗವನ್ನು ತಪ್ಪದೇ ಮಾಡಬೇಕು. ಸರ್ವ ವಂಶ ಸಹಿತವಾಗಿ ಅವುಗಳನ್ನು ತ್ಯಾಗ ಮಾಡಬೇಕು. ಅಂಶ ಮಾತ್ರವಿದ್ದರೂ

ಕೂಡ ಅವು ಸಮಯಾನುಸಾರ ವಂಶವಾಗಿ ಬೆಳೆದುಬಿಡುತ್ತವೆ. ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ನೇಹ, ಸಂಬಂಧ ಹಾಗೂ ಸೇವೆಯ ಜೊತೆಯನ್ನು ನಿಭಾಯಿಸುವ ಸ್ನೇಹಿ.

2. ನಾನು ವಿಷಯ ಎಂಬ ಪರದೆಯನ್ನು ತೊಲಗಿಸಿ ಸದಾ ತಂದೆಯ ಜೊತೆಯನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

3. ನಾನು ಹೃದಯರಾಮನಾದ ತಂದೆಯ ಹೃದಯ ನನ್ನ ಹೃದಯದಲ್ಲಿ ನನ್ನ ಹೃದಯವನ್ನು ತಂದೆಯ ಹೃದಯದಲ್ಲಿ ಇಟ್ಟು ಸದಾ ಆತ್ಮಿಕ ಜೊತೆಯನ್ನು ಅನುಭವ ಮಾಡಿಕೊಂಡಿದ್ದೇನೆ.

4. ನಾನು ಸದಾ ಬ್ರಹ್ಮಾ ತಂದೆಯ ಅವ್ಯಕ್ತ ಪಾಲನೆಯನ್ನು ಪಡೆಯುತ್ತಿದ್ದೇನೆ ಮತ್ತು ತಂದೆಯ ಸಮಾನವಾಗಿ ಅವ್ಯಕ್ತ ಸೇವೆಯನ್ನು ಮಾಡುತ್ತಿದ್ದೇನೆ.

5. ನನ್ನ ಆಚರಣೆ ಮತ್ತು ಉಚ್ಚರಣೆ ಎರಡೂ ಬ್ರಹ್ಮಾ ತಂದೆಯ ಸಮಾನವಾಗಿ ಇವೆ.

6. ನಾನು ದಿನವಿಡೀ ಮನಸಾ, ವಾಚಾ, ಕರ್ಮಣಾ, ಸಂಬಂಧ-ಸಂಪರ್ಕಗಳಲ್ಲಿ ತಂದೆಯಿಂದ ಲಭಿಸಿರುವ ಆಜ್ಞೆಯ ಅನುಸಾರ ನಡೆಯುತ್ತಿದ್ದೇನೆ. (ಬ್ರಹ್ಮಾ ತಂದೆಯ ಮೊದಲ ಹೆಜ್ಜೆ ಆಜ್ಞಾಕಾರಿಯಾದರು.)

7. ನಾನು ಸದಾ ಆಜ್ಞಾಕಾರಿಯಾಗಿ ಇರುತ್ತಾ ತಂದೆ ಮತ್ತು ಸರ್ವರ ಆಶೀರ್ವಾದಗಳನ್ನು ಪಡೆದಿದ್ದೇನೆ ಮತ್ತು ಆಶೀರ್ವಾದಗಳ ಪ್ರಭಾವದಿಂದ ನನ್ನ ಹೃದಯ ಸದಾ ಸಂತುಷ್ಟವಾಗಿ ಇದೆ .

8. ನಾನು ನನ್ನ ಹೃದಯದ ಸಂತುಷ್ಟತೆಯಿಂದ ಯಥಾರ್ಥವಾಗಿರುವ ಡಬಲ್ ಲೈಟ್ ಸ್ವರೂಪ.

9. ನಾನು ಪ್ರತಿಯೊಬ್ಬ ಆತ್ಮ ನನ್ನನ್ನು ನೋಡಿ ಖುಷಿಯಾಗಿರಬೇಕು, ಹಗುರವಾಗಿರಬೇಕು, ಭಾರ ಸಮಾಪ್ತಿಯಾಗಬೇಕು ಎಂಬ ಲಕ್ಷ್ಯ ವನ್ನು ಪೂರ್ಣಗೊಳಿಸಿದ್ದೇನೆ.

10. ನನ್ನ ಮಾತಿನಿಂದ ಉನ್ನತವಾಗಿರುವ ನನ್ನ ಭಾವ ಮತ್ತು ಭಾವನೆ (ವೈಬ್ರೇಶನ್ಸ್) ಇತರರವರಿಗೆ ತಲುಪಿರುವ ಕಾರಣ ಸ್ವಯಂ ಮತ್ತು ಇತರರು ಕೂಡ ಸಂತುಷ್ಟವಾಗಿ ಇದ್ದಾರೆ.

11. ನಾನು ಇಲ್ಲಿ ಬ್ರಾಹ್ಮಣಾತ್ಮರ ಮತ್ತು ತಂದೆಯ ಆಶೀರ್ವಾದಗಳಿಗೆ ಪಾತ್ರನಾಗಿ ಅಲ್ಲಿ ರಾಜ್ಯಾಧಿಕಾರಕ್ಕೆ ಪಾತ್ರನಾಗಿದ್ದೇನೆ

12. ನಾನು ಸರ್ವರನ್ನು ಸಂತುಷ್ಟ ಮಾಡುವ ಸಂಸ್ಕಾರವನ್ನು ಇಲ್ಲೇ ತುಂಬಿಕೊಂಡು ಅಲ್ಲಿನ ನನ್ನ ರಾಜ್ಯದ ರಾಜಕುಟುಂಬದವರನ್ನು ಮತ್ತು ಪ್ರಜೆಗಳನ್ನು ಇಲ್ಲೇ ಸಂತುಷ್ಟ ಮಾಡಿದ್ದೇನೆ.

13. ನಾನು ಬ್ರಹ್ಮಾ ತಂದೆಯನ್ನು ಅನುಸರಿಸುತ್ತಾ... ಕಾರಣವನ್ನು ನಿವಾರಣೆ ಮಾಡಿರುವ ನಿವಾರಣ ಶಕ್ತಿ ಸ್ವರೂಪ.

14. ನಾನು ಸಾಕ್ಷಿ ಸ್ಥಿತಿ ಎಂಬ ಸಿಂಹಾಸನದ ಮೇಲೆ ಕುಳಿತು ನನ್ನ ವಿಷಯಗಳು ಮತ್ತು ಇತರರ ವಿಷಯಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸರಿಯಾದ ನಿರ್ಣಯವನ್ನು ತೆಗೆದುಕೊಂಡಿದ್ದೇನೆ.

15. ನಾನು ಎಂತಹ ವಿಷಯ ಬಂದರೂ ನಿಲ್ಲದೆ ಮುಂದಕ್ಕೆ ಹೋಗಿರುವ ಬುದ್ಧಿಯುಳ್ಳ ಮಗು.

16. ನಾನು ಬ್ರಹ್ಮಾತಂದೆಯ ಸಮಾನವಾದ ಅಜ್ಞಾಕಾರಿಯಾಗಿ ಆಶೀರ್ವಾದಗಳನ್ನು ಪಡೆದು, ಆಶೀರ್ವಾದಗಳ ಆಧಾರದಿಂದ ದೇಹ ಸಂಬಂಧಗಳೇ ಅಲ್ಲದೆ ದೇಹದ ಹಳೆಯ ಸ್ವಭಾವ ಸಂಸ್ಕಾರಗಳನ್ನು ಸರ್ವ ವಂಶ ಸಹಿತವಾಗಿ ತ್ಯಾಗ ಮಾಡಿರುವ ಸರ್ವಸ್ವತ್ಯಾಗಿ .

17. ನಾನು ಬೇಹದ್ದಾಗಿ ಸಹಿಸಿ ಬೇಹದ್ದಾಗಿ ಆಶೀರ್ವಾದಗಳನ್ನು ಪಡೆದಿರುವ ಸಹನ ಶಕ್ತಿ ಸ್ವರೂಪ, ಆಜ್ಞಾಕಾರಿ.

18. ನಾನು ಕಾರಣಗಳು, ಅಳು ಎಂಬ ಫೈಲ್ಸನ್ನು (ಆವೇಶದಲ್ಲಿ ಬರುವುದು ಕೂಡ ಅಳುವುದೇ) ಸಮಾಪ್ತಿ ಮಾಡಿ ರಿಫೈನ್ (ಪರಿಶುದ್ಧ)ವಾಗಿದ್ದೇನೆ.

19. ನಾನು ಬಾಪ್‌ದಾದಾರವರಿಂದ ದಿವ್ಯಗುಣಗಳ ಆಭರಣಗಳ ಸೆಟ್ಟನ್ನು ಬಹುಮಾನವಾಗಿ ಪಡೆದಿರುವ ಸುಪುತ್ರನು.

20. ನಾನು ಸದಾ ಸ್ಮೃತಿ ಮತ್ತು ಸೇವೆಯ ಸಮಾನತೆಯಲ್ಲಿ ಇದ್ದೇನೆ.

21. ನಾನು ತಂದೆ ಕೊಟ್ಟಿರುವ ದಿವ್ಯ ಗುಣಗಳ ಆಭರಣದ ಸೆಟ್ಟನ್ನು ಡಬಲ್ ಕೀಲಿ ಕೈಯಿಂದ (ಸ್ಮೃತಿ & ಸೇವೆ) ಸುರಕ್ಷಿತವಾಗಿ ಇಟ್ಟುಕೊಂಡಿದ್ದೇನೆ.